ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

24 ಜುಲೈ, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 133 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629




ಹರಾರೆಯಲ್ಲಿ ಗುರುವಾರ ಜಿಂಬಾಬ್ವೆ ವಿರುದ್ಧ ನಡೆದ ಮೊದಲ ಟಿ-20 ಪಂದ್ಯದಲ್ಲಿ ಭಾರತ 7 ವಿಕೆಟ್‌ಗಳಿಂದ ಜಯ ಗಳಿಸಿದೆ...

ಈ ವಾರ ನಿರೀಕ್ಷೆ ಹೆಚ್ಚಿಸಿರುವ ಆಸಕ್ತಿಕರ ಸಿನಿಮಾಗಳು » 2



ಎಸ್‌ಐಆರ್ : 31 ಮತಗಟ್ಟೆಗಳಲ್ಲಿ ಗಣಕೀಕರಣ ಶೇ.100 ಸಾಧನೆ » 3



ಮಕ್ಕಳ ಭವಿಷ್ಯಕ್ಕಾಗಿ ಪ್ರತಿಭಟನೆ : ಡಿ.ಕೆ.ಶಿವಕುಮಾರ್ » 4


# ನೀಟ್ ಬಿಸಿ: ಸದನದ ಒಳಗೂ, ಹೊರಗೂ ಗದ್ದಲ

## ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಪಟ್ಟು | ಕೇಂದ್ರ ಸರ್ಕಾರದ ವಿರುದ್ಧ ಪ್ರತಿಪಕ್ಷಗಳ ವಾಗ್ದಾಳಿ

• ಪ್ರಜೋದಯ ವರದಿ

**ನವದೆಹಲಿ:** ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಮತ್ತು ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿಚಾರ ಚರ್ಚೆಗೆ ಒತ್ತಾಯಿಸಿ ವಿಪಕ್ಷಗಳ ಪಟ್ಟು ಹಿಡಿದ ಹಿನ್ನಲೆ ಮುಂಗಾರು ಅಧಿವೇಶನದ ನಾಲ್ಕನೇ ದಿನದ ಕಲಾಪವೂ ಬಲಿಯಾಗಿದೆ.

ಗುರುವಾರ ಸಂಸತ್ತಿನ ಒಳಗೂ, ಹೊರಗೂ ಆಡಳಿತ ಮತ್ತು ಪ್ರತಿಪಕ್ಷಗಳ ನಡುವಿನ ಗದ್ದಲ ಜೋರಾಗಿಯೇ ನಡೆಯಿತು. ಸಂಸತ್ ಹೊರಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಂಸದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಸೇರಿ ವಿರೋಧ ಪಕ್ಷದ ಸಂಸದರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ವಿರೋಧ ಪಕ್ಷಗಳ ಪ್ರತಿಭಟನೆ ವೇಳೆ ಎನ್‌ಡಿಎ ಸಂಸದರು ಸಹ ಪ್ರತಿಭಟನೆ ನಡೆಸಿದ್ದು, ಎರಡೂ ಕಡೆಯವರಿಂದ ಪರಸ್ಪರ ಪರ-ವಿರೋಧ ಘೋಷಣೆಗಳು ಕೇಳಿ ಬಂದವು.

ಸಂಸತ್ತಿನ ಒಳಗೂ ಸಹ ಗದ್ದಲ ಮುಂದುವರೆಯಿತು. ಲೋಕಸಭೆ ಮತ್ತು ರಾಜ್ಯಸಭೆಯ ಕಲಾಪಗಳನ್ನು ಮಧ್ಯಾಹ್ನದವರೆಗೆ ಮುಂದೂಡಲಾಯಿತು. ರಾಜ್ಯಸಭೆ ಹಾಗು ಲೋಕಸಭೆಯ ಕಲಾಪ ಪುನರಾರಂಭವಾಯಿತಾದರೂ ಭಾರೀ ಗದ್ದಲ ಹಿನ್ನಲೆಯಲ್ಲಿ ಶುಕ್ರವಾರಕ್ಕೆ ಮುಂದೂಡಲಾಯಿತು.



### ಚರ್ಚೆ ನಡೆಸಲು ಸರ್ಕಾರ ಸಿದ್ಧ

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಕುರಿತು ಸಮಗ್ರ ಚರ್ಚೆ ನಡೆಸಲು ಸರ್ಕಾರ ಸಿದ್ಧವಿದೆ ಎಂದು ಕೇಂದ್ರ ಸರ್ಕಾರ ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಈ ಕುರಿತು ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಯಾವ ನಿಯಮದಡಿ, ಯಾವಾಗ, ಎಷ್ಟು ಅವಧಿಗೆ ಚರ್ಚೆ ನಡೆಯಬೇಕೆಂಬುದನ್ನು ಎಲ್ಲಾ ಪಕ್ಷಗಳ ಸದನ ನಾಯಕರೊಂದಿಗೆ ಸಮಾಲೋಚಿಸಿ ಸ್ಪೀಕರ್ ನಿರ್ಧರಿಸಲಿದ್ದಾರೆಂದು ತಿಳಿಸಿದ್ದಾರೆ.

ಸಂಸತ್ತಿನಲ್ಲಿ ಚರ್ಚೆ ನಡೆಸುವ ಬದಲು ಪ್ರತಿಪಕ್ಷಗಳು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿವೆ ಎಂದು ಆರೋಪಿಸಿದ ಅವರು, ಯುವಜನತೆಗೆ ಸಂಬಂಧಿಸಿದ ಸೂಕ್ಷ್ಮ ವಿಷಯಗಳನ್ನು ಸದನದಲ್ಲಿಯೇ ಚರ್ಚಿಸಬೇಕು. ರಸ್ತೆ ಪ್ರತಿಭಟನೆಗಳಿಂದ ಯಾವುದೇ ಅನುಕೂಲವಾಗುವುದಿಲ್ಲವೆಂದು ಹೇಳಿದರು.

ಕೇಂದ್ರದ ವಿರುದ್ಧ ಹರಿಹಾಯ್ದ ಮಲ್ಲಿಕಾರ್ಜುನ ಖರ್ಗೆ ಅವರು, ಪ್ರತಿಭಟನೆ ವೇಳೆ ಗಾಯಗೊಂಡ ವಿದ್ಯಾರ್ಥಿಗಳ ಕಣ್ಣುಗಳನ್ನು ಒಮ್ಮೆ ನೋಡಿ. ಯುವಕರ ಭವಿಷ್ಯದೊಂದಿಗೆ ಚೆಲ್ಲಾಟವಾಡುವವರನ್ನು ಸುಮ್ಮನೆ ಬಿಡುವುದಿಲ್ಲ. ಯುವಕರಿಗೆ ಎಲ್ಲಾ ದಾರಿಗಳೂ ಮುಚ್ಚಿ ಹೋಗಿವೆ ಮತ್ತು ಅವರು ಎಲ್ಲಿಗೆ ಹೋಗಬೇಕೆಂದು ಪ್ರಶ್ನಿಸಿದ್ದಾರೆ.

ನರೇಂದ್ರ ಮೋದಿ ಜೀ, ನಿಮ್ಮ ಆಡಳಿತಾವಧಿಯಲ್ಲಿ ಶಿಕ್ಷಣ ವ್ಯವಸ್ಥೆಯು ಹದಗೆಟ್ಟಿದೆ. ನಮಗೆ ಕೇವಲ ಮೇಲ್ನೋಟದ ಮಾತುಗಳಾಗಲಿ ಅಥವಾ ಸದ್ಯದ ಪರಿಸ್ಥಿತಿಯನ್ನು ತಿಳಿಗೊಳಿಸುವ ಸಣ್ಣಪುಟ್ಟ ಘೋಷಣೆಗಳಾಗಲಿ ಬೇಕಿಲ್ಲ. ನಿಮ್ಮ ಹವಾನಿಯಂತ್ರಿತ ಐಷಾರಾಮಿ ನಿವಾಸದಿಂದ ಹೊರಬನ್ನಿ ಮತ್ತು ಸರ್ವಾಧಿಕಾರವನ್ನು ವಿರೋಧಿಸಿ ಬೀದಿಗಳಲ್ಲಿ ರಕ್ತ ಚೆಲ್ಲಿದ ಯುವಕ-ಯುವತಿಯರ ಕಣ್ಣುಗಳಲ್ಲಿ ಕಣ್ಣಿಟ್ಟು ನೇರವಾಗಿ ನೋಡಿ ಎಂದು ಹೇಳಿದರು.

### ಅಣ್ಣಾ ಹಜಾರೆ ಮೌನ ಚಳವಳಿ



ಹಿರಿಯ ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಅವರು ದೆಹಲಿಯಲ್ಲಿನ ವಿದ್ಯಾರ್ಥಿಗಳ ಚಳವಳಿಯನ್ನು ಬೆಂಬಲಿಸಲು ಗುರುವಾರ ಅಹಲ್ಯಾ ನಗರದಲ್ಲಿ ಮೌನ ಚಳವಳಿಯನ್ನು ಪ್ರಾರಂಭಿಸಿದ್ದಾರೆ. ವಿದ್ಯಾರ್ಥಿಗಳ ಮೇಲೆ ನಡೆದ ದೌರ್ಜನ್ಯದ ಬಗ್ಗೆ ಅಣ್ಣಾ ಹಜಾರೆ ಕಳವಳ ವ್ಯಕ್ತಪಡಿಸಿ, ಸರ್ಕಾರವು ಸರ್ವಾಧಿಕಾರದ ಮಾರ್ಗವನ್ನು ಸ್ವೀಕರಿಸಬಾರದು. ವಿದ್ಯಾರ್ಥಿಗಳೊಂದಿಗೆ ನೇರ ಸಂವಾದದ ಮೂಲಕ ಅವರ ಪ್ರಶ್ನೆಗಳನ್ನು ಪರಿಹರಿಸಬೇಕು. ಪ್ರಜಾಪ್ರಭುತ್ವದಲ್ಲಿ ಸಂವಾದ ಮತ್ತು ಚರ್ಚೆಯ ಮಾರ್ಗವನ್ನು ಅಭಿಪ್ರಾಯ ವ್ಯತ್ಯಾಸಗಳಿಗೆ ಉತ್ತರವಾಗಿ ಸ್ವೀಕರಿಸಬಾರದೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

# ಬರ ಎದುರಿಸಲು ಸರ್ಕಾರ ಸನ್ನದ್ಧ

• ಪ್ರಜೋದಯ ವರದಿ

**ಬೆಂಗಳೂರು:** ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ನಮ್ಮ ಸರ್ಕಾರ ಸಿದ್ಧವಿದೆ. ಕುಡಿಯುವ ನೀರಿನ ಸಮರ್ಪಕ ಪೂರೈಕೆಗಾಗಿ ಪ್ರತಿ ಜಿಲ್ಲೆಗೆ 5 ಕೋ.ರೂ. ನೀಡಿದ್ದೇವೆಂದು ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಪಿಡಿ ಖಾತೆಗಳಲ್ಲಿ 329 ಕೋ.ರೂ. ಲಭ್ಯವಿದೆ. ಸರ್ಕಾರದಲ್ಲಿ ಹಣದ ಕೊರತೆ ಇಲ್ಲ. ರೈತರು, ಸಾಮಾನ್ಯ ಜನರಿಗೆ ಸಮಸ್ಯೆಯಾಗದಂತೆ ಯಾವ ರೀತಿಯ ಕ್ರಮ ಕೈಗೊಳ್ಳಬಹುದೆಂಬುದರ ಬಗ್ಗೆ ತೀರ್ಮಾನಿಸುತ್ತೇವೆಂದರು.

ಜನರು ಉದ್ಯೋಗಕ್ಕಾಗಿ ಗುಳೆ ಹೋಗುವುದನ್ನು ತಪ್ಪಿಸಲು ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು ವಿಬಿ-ಜಿ ರಾಮ್ ಜಿ ಯೋಜನೆಯಡಿ ಕೂಡಲೇ ಜನರಿಗೆ ಉದ್ಯೋಗ ನೀಡುವಂತೆ ಸೂಚಿಸಿದ್ದೇನೆ. ನಮ್ಮಲ್ಲಿ ಹಣದ ಕೊರತೆ ಇಲ್ಲ. ಶೀಘ್ರವೇ ಕಾಮಗಾರಿ ಆರಂಭಿಸುವಂತೆ ತಿಳಿಸಿದ್ದೇವೆ. ಕೇಂದ್ರ ಸರ್ಕಾರಕ್ಕೆ ನಾವು ಪತ್ರ ಬರೆದಿದ್ದೇವೆ.



ಆದರೆ, ಈವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆಗಸ್ಟ್ ತಿಂಗಳಲ್ಲಿ ಅವರು ಮನವಿಯನ್ನು ನಿರೀಕ್ಷಿಸುತ್ತಾರೆ. ಆವಾಗ ನಾವು ಮನವಿ ಸಲ್ಲಿಸಿದರೆ ಹಣ ಬಿಡುಗಡೆ ಮಾಡುತ್ತಾರೆಂದು ತಿಳಿಸಿದರು.

ನೀವು ಭೇಟಿ ಕೊಟ್ಟ ಜಿಲ್ಲೆಗಳಲ್ಲಿ ಕೃಷಿ ಚಟುವಟಿಕೆಗಳು ಪ್ರಾರಂಭವಾಗಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಮುಂಗಾರಿನಲ್ಲಿ ಸ್ವಲ್ಪ ಮಳೆಯಾದ್ದರಿಂದ ರೈತರು ಬೀಜ ಬಿತ್ತನೆ ಮಾಡಿದ್ದಾರೆ. ಆ ಮೇಲೆ ಮಳೆಯಾಗಿಲ್ಲ. ಈಗ ಬಿತ್ತನೆ ಮಾಡಿದ್ದೆಲ್ಲಾ ಒಣಗಿ ಹೋಗಿದೆ. ಈಗ ಮತ್ತೆ ಆಗಸ್ಟ್ ತಿಂಗಳಲ್ಲಿ ಮಳೆಯಾದರೆ ಬೀಜ ಬಿತ್ತನೆ ಮಾಡುತ್ತಾರೆ. ಅದೊಂದು ನಿರೀಕ್ಷೆ ಇದೆ ಎಂದು ಹೇಳಿದರು.

# ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಮನೆ ಕಳವು ಪ್ರಕರಣಗಳು

- ಮಧ್ಯರಾತ್ರಿ ನುಗ್ಗುವ ಕಳ್ಳರ ಗುಂಪು
- ಗ್ರಾಮೀಣ ಭಾಗದಲ್ಲೂ ಭೀತಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚುತ್ತಲೇ ಇದ್ದು, ಗ್ರಾಮೀಣ ಪ್ರದೇಶಗಳಲ್ಲೂ ಆತಂಕ ಮನೆ ಮಾಡಿದೆ.

ಒಂಟಿ ಮನೆ, ಹಲವು ದಿನಗಳವರೆಗೆ ಬೀಗ ಹಾಕಿರುವ ಮನೆಗಳನ್ನು ಗುರಿಯಾಗಿಸಿಕೊಳ್ಳುತ್ತಿರುವ ಕಳ್ಳರ ಜಾಲ ವ್ಯವಸ್ಥಿತ ಯೋಜನೆಯೊಂದಿಗೆ ಕಾರ್ಯ ಸಾಧಿಸುತ್ತಿದೆ. ಅಪರಾಧ ಕೃತ್ಯ ತಡೆಗೆ ಪೊಲೀಸ್ ಇಲಾಖೆ ಎಷ್ಟೇ ಮುನ್ನೆಚ್ಚರಿಕೆ ವಹಿಸಿದರೂ ಕಳ್ಳತನ ಪ್ರಕರಣಗಳು ಇಲಾಖೆಯ ಕಾರ್ಯ ವೈಖರಿಯನ್ನು ಪ್ರಶ್ನಿಸುವಂತಾಗಿದೆ.

ಎಂದಿನಂತೆ ಮನೆಯ ಕಿಟಕಿಯಲ್ಲಿಟ್ಟಿದ್ದ ಕೀ ನೆರವಿನಿಂದ ಒಳ ಪ್ರವೇಶಿಸಿರುವ ಕಳ್ಳರು 21 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ದೊಡ್ಡಆಲದಹಳ್ಳಿ ಗ್ರಾಮದಲ್ಲಿ ಜು. 20ರಂದು ನಡೆದಿದೆ.

ಡಿ.ಡಿ.ದರ್ಶನ್ ಅವರ ಮನೆಯಲ್ಲಿ ಕೀ ಸಹಾಯದಿಂದ ಬೀರುವಿನಲ್ಲಿಟ್ಟಿದ್ದ 15 ಗ್ರಾಂ ತೂಕದ ಕೊರಳ ಚಿನ್ನದ



ಚೈನ್, 4 ಗ್ರಾಂ ಹಾಗು 2 ಗ್ರಾಂ ತೂಕದ ಉಂಗುರುಗಳನ್ನು ಕಳವು ಮಾಡಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಬಾಗಿಲ ಬೀಗ ಮುರಿದು 50 ಗ್ರಾಂ ತೂಕದ ಚಿನ್ನಾಭರಣ, 260 ಗ್ರಾಂ ಬೆಳ್ಳಿ ಆಭರಣ, 50 ಸಾವಿರ ರೂ. ನಗದು ಕಳವು ಮಾಡಿರುವ ಘಟನೆ ಅರಕಲಗೂಡು ತಾಲ್ಲೂಕು ರಘುಪತಿ ಕೊಪ್ಪಲು ಗ್ರಾಮದಲ್ಲಿ ಇತ್ತೀಚೆಗೆ ನಡೆದಿದೆ.

ಮನೆ ಮಾಲೀಕರಾದ ರಜಿನಿ ಹಾಗು ಪ್ರತಾಪ್ ಅವರು ಜು. 17ರಂದು ಮನೆಗೆ ಬೀಗ ಹಾಕಿ ಕೇರಳ ಪ್ರವಾಸಕ್ಕೆ ತೆರಳಿದ್ದರು. ಎರಡು ದಿನಗಳ ಬಳಿಕ ಬಂದಾಗ ಮನೆ ಬಾಗಿಲ ಬೀಗ ಮುರಿದಿರುವುದು ಗೊತ್ತಾಗಿದೆ. ಬೀರುವಿನಲ್ಲಿದ್ದ 16 ಗ್ರಾಂ ತೂಕದ ಚಿನ್ನದ ಸರ, 2 ಗ್ರಾಂನ ಚಿನ್ನದ ಡಾಲರ್, 5 ಗ್ರಾಂ ತೂಕದ ಹಸಿರು ಕಲ್ಲಿನ ಚಿನ್ನದ ಒಂದು ಉಂಗುರ, 5 ಗ್ರಾಂ ತೂಕದ ಚಿನ್ನದ ಕೆಂಪು ಮತ್ತು ಬಿಳಿ ಮಿಶ್ರಿತ ಕಲ್ಲಿನ 1 ಉಂಗುರ, 3 ಗ್ರಾಂ ತೂಕದ ಒಂದು ಜೊತೆ ಓಲೆ, 8 ಗ್ರಾಂನ ಬಿಳಿ ಬಣ್ಣದ ಜುಮುಕಿ, ಬಿಳಿ ಹರಳಿನ 10 ಗ್ರಾಂ ತೂಕದ ಒಂದು ಜೊತೆ ಓಲೆ, ಸುಮಾರು 260 ಗ್ರಾಂ ತೂಕದ ಬೆಳ್ಳಿ ಚೊಂಬು ಹಾಗು 50 ಸಾವಿರ ರೂ. ನಗದು ಕಳವು ಮಾಡಲಾಗಿದೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಮಾಂಗಲ್ಯ ಸರ ದೋಚಿ ಪರಾರಿ

ಸ್ಕೂಟಿಯಲ್ಲಿ ತೆರಳುತ್ತಿದ್ದ ಮಹಿಳೆಯನ್ನು ಅಡ್ಡಹಾಕಿದ ಅಪರಿಚಿತರು ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಹೊಳೆನರಸೀಪುರ ತಾಲ್ಲೂಕು ಅತ್ತಿಚೌಡನಹಳ್ಳಿ ಗ್ರಾಮದ ಬಳಿ ಬುಧವಾರ ನಡೆದಿದೆ.

ಕಲ್ಲೇನಹಳ್ಳಿ ಗ್ರಾಮದ ದಿವ್ಯ ಎಂಬುವವರ 30 ಗ್ರಾಂ ತೂಕದ ಸರ ಕಳುವಾಗಿದೆ. ಜಮೀನು ಕೆಲಸದ ಹಿನ್ನಲೆಯಲ್ಲಿ ಅವರು ಹೋಗುತ್ತಿದ್ದಾಗ ಅಡ್ಡ ಹಾಕಿದ ಮೂವರು ಅಪರಿಚಿತರು ಚಾಕು ತೋರಿಸಿ ಕುತ್ತಿಗೆಯಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಯುವಕನ ಕಟ್ಟಿ ಹಾಕಿ ದರೋಡೆ

**ಆಲೂರು :** ಹಿಂಬಾಗಿಲಿನಿಂದ ಬಂದ ಕಳ್ಳರುಯುವಕನ ಕೈಕಾಲು ಕಟ್ಟಿಹಾಕಿ ಆತನ ತಂದೆ-ತಾಯಿಗೆ ಹೆದರಿಸಿ ಚಿನ್ನಾಭರಣ ದರೋಡೆ ಮಾಡಿರುವ ತಾಲ್ಲೂಕಿನ ಈಶ್ವರಹಳ್ಳಿ ಕೂಡಿಗೆ ಬಳಿ ಬುಧವಾರ ರಾತ್ರಿ ನಡೆದಿದೆ.

ನಿವೃತ್ತ ಶಿಕ್ಷಕಿ ಚನ್ನಮ್ಮ ಹಾಗು ಮಂಜೇಗೌಡ ಅವರ ಮನೆಗೆ ಮಂಕಿ ಕ್ಯಾಪ್, ಮಾಸ್ಕ್ ಧರಿಸಿ ಲಾಂಗ್ ಹಿಡಿದು ಬಂದಿದ್ದ ಮೂವರು ಕಿಡಿಗೇಡಿಗಳು ಹಿಂಬಾಗಿಲಿನಿಂದ ಒಳ ಪ್ರವೇಶಿಸಿ ಕೊಠಡಿಯಲ್ಲಿ ಮಲಗಿದ್ದ ದಂಪತಿ ಪುತ್ರ ಯಶಸ್‌ನ ಕೈಕಾಲು ಕಟ್ಟಿ ಹಾಕಿದ್ದಾರೆ ಎನ್ನಲಾಗಿದೆ. ನಾವು ಹೇಳಿದ ಹಾಗೆ ಕೇಳದಿದ್ದರೆ ನಿಮ್ಮ ಮಗನನ್ನು ಕೊಲ್ಲುತ್ತೇವೆಂದು ಬೆದರಿಕೆ ಹಾಕಿದ್ದಾರೆ. ಮಗನ ಜೀವ ಉಳಿದರೆ ಸಾಕೆಂದು ದಂಪತಿ ಅಸಹಾಯಕರಾಗಿ ನಿಂತಿದ್ದಾರೆ. 60 ಗ್ರಾಂ ತೂಕದ ಚಿನ್ನ, 50 ಗ್ರಾಂ ತೂಕದ ಬೆಳ್ಳಿ ಆಭರಣ, 25 ಸಾವಿರ ರೂ. ನಗದು, ಮೊಬೈಲ್, ಕೈಗಡಿಯಾರ ದೋಚಿದ್ದಾರೆ.

ಘಟನೆ ಕುರಿತು ಯಶಸ್ ಮಾತನಾಡಿ, ಮೇಲಂತಸ್ತಿನ ಕೊಠಡಿಯಲ್ಲಿ ಮಲಗಿದ್ದೆ. ರಾತ್ರಿ 1.30ರ ಸಮಯದಲ್ಲಿ



ಬಂದ ಮೂವರು ಕನ್ನಡದಲ್ಲೇ ಮಾತನಾಡುತ್ತಿದ್ದರು. ಏಕಾಏಕಿ ನನ್ನ ಕೊಠಡಿಗೆ ಬಂದು ಕೂಗಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು. ತಂದೆ- ತಾಯಿಯನ್ನು ಕರೆದು ಚಿನ್ನಾಭರಣ ಕೊಡುವಂತೆ ಸೂಚಿಸಿ, ಹೇಳಿದ ಹಾಗೆ ಕೇಳದಿದ್ದರೆ ಜೀವಕ್ಕೆ ಅಪಾಯವಾಗುವ ಸಂಭವವಿತ್ತು ಎಂದರು. ಚಾಕು ತೋರಿಸುತ್ತಾ ಮನೆ ಯೆಲ್ಲಾ ಶೋಧ ನಡೆಸಿದ ಕಳ್ಳರು ತಲೆದಿಂಬಿನ ಕೆಳಗಿಟ್ಟಿದ್ದ ಅಮ್ಮನ ಮಾಂಗಲ್ಯ ಸರವನ್ನೂ ಬಿಟ್ಟಿಲ್ಲ. ತಪ್ಪಿತಸ್ಥರನ್ನು ಶೀಘ್ರ ಪತ್ತೆ ಮಾಡಿ ನ್ಯಾಯ ದೊರಕಿಸಿಕೊಡಬೇಕೆಂದು ಆಗ್ರಹಿಸಿದರು. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಶ್ವಾನದಳದ ನೆರವಿನಿಂದ ಕಳ್ಳರ ಸುಳಿವು ಪತ್ತೆಹಚ್ಚುವ ಕಾರ್ಯ ನಡೆಸಿದರು. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಪೂರಕ ಪೌಷ್ಟಿಕ ಆಹಾರ: 25 ರಿಂದ 22ಕ್ಕೆ ಇಳಿದ ಮೊಟ್ಟೆ ಸಂಖ್ಯೆ

## ಪ್ರತಿ ಮೊಟ್ಟೆಗೆ 2 ರೂ. ಏರಿಕೆ ಹಿನ್ನಲೆ | ಬಾಲ ವಿಕಾಸ ಸಮಿತಿ ನಿರ್ಧಾರ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಲ್ಲಿ ಪೂರಕ ಪೌಷ್ಟಿಕ ಆಹಾರ ಯೋಜನೆಯಡಿ ವಿತರಿಸಲಾಗುತ್ತಿದ್ದ ಮೊಟ್ಟೆ ಸಂಖ್ಯೆಯಲ್ಲಿ ಕಡಿತಗೊಳಿಸಿದ್ದು, ಫಲಾನುಭವಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಗರ್ಭಿಣಿ ಹಾಗು ಬಾಣಂತಿಯರಿಗೆ ಪ್ರತಿ ತಿಂಗಳು 25 ಮೊಟ್ಟೆ ನೀಡಲಾಗುತ್ತಿತ್ತು. ಆದರೆ ಇತ್ತೀಚೆಗೆ ಮೊಟ್ಟೆ ದರದಲ್ಲಿ ಏರಿಕೆಯಾಗಿರುವುದರಿಂದ ಪ್ರಮಾಣವನ್ನು 22ಕ್ಕೆ ಇಳಿಸಲಾಗಿದೆ. ಈ ಕಾರಣಕ್ಕಾಗಿ ಅನೇಕ ಅಂಗನವಾಡಿಗಳಲ್ಲಿ ಫಲಾನುಭವಿಗಳು ಮತ್ತು ಸಿಬ್ಬಂದಿ ನಡುವೆ ವಾಗ್ವಾದ ನಡೆಯುತ್ತಿವೆ. ಸರ್ಕಾರ ಮೊಟ್ಟೆ ವಿತರಣೆಗಾಗಿ ಪ್ರತಿ ಫಲಾನುಭವಿಗೆ 150 ರೂ. ನೀಡುತ್ತದೆ. ಪ್ರತಿ ಮೊಟ್ಟೆಗೆ 6 ರೂ. ಇದ್ದಾಗ ತಿಂಗಳಿಗೆ 25 ಮೊಟ್ಟೆ ನೀಡಬಹುದಿತ್ತು. ಆದರೀಗ ಮೊಟ್ಟೆ ಬೆಲೆ 7 ರಿಂದ 8 ರೂ.ಗೆ ಹೆಚ್ಚಿರುವುದರಿಂದ ಪ್ರಮಾಣ ಕಡಿಮೆ ಮಾಡಲಾಗಿದೆ. ಈ ಬಗ್ಗೆ ಬಾಲ ವಿಕಾಸ ಸಮಿತಿ ಸಭೆಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗಿದೆ. ಜಿಲ್ಲೆಯ 2691 ಅಂಗನವಾಡಿಗಳಲ್ಲೂ ಈ ನಿರ್ಣಯ ಕೈಗೊಳ್ಳಲಾಗಿದೆ. ಕೆಲವೆಡೆ ಸಾರ್ವಜನಿಕರು ಅಂಗನವಾಡಿ ಸಿಬ್ಬಂದಿ ಮೇಲೆಯೇ ಭ್ರಷ್ಟಾಚಾರದ ಆರೋಪ ಮಾಡುತ್ತಾ ಗಲಾಟೆಯ ಪ್ರಕರಣಗಳು ವರದಿಯಾಗಿವೆ.



**ಪೂರಕ ಪೌಷ್ಟಿಕ ಆಹಾರ ಫಲಾನುಭವಿಗಳ ವಿವರ**

| | |
|---|---|
| ಹಾಸನ | 15882 |
| ಚನ್ನರಾಯಪಟ್ಟಣ | 11123 |
| ಹೊಳೆನರಸೀಪುರ | 10884 |
| ಬೇಲೂರು | 8237 |
| ಸಕಲೇಶಪುರ | 6310 |
| ಆಲೂರು | 4425 |
| ಅರಸೀಕೆರೆ | 15138 |
| ಅರಕಲಗೂಡು | 9753 |

ಅರಸೀಕೆರೆ ತಾಲ್ಲೂಕಿನ ಬಾಣಾವರ, ಜಾವಗಲ್ ಹೋಬಳಿ ವ್ಯಾಪ್ತಿಯಲ್ಲಿ ಇಂತಹ ಘಟನೆಗಳು ನಡೆಯುತ್ತಿದ್ದು, ಸಾರ್ವಜನಿಕರನ್ನು ಸಮಾಧಾನಪಡಿಸಲು ಅಧಿಕಾರಿಗಳು ಹರಸಾಹಸ ಪಡುತ್ತಿದ್ದಾರೆ. ಜಿಲ್ಲಾದ್ಯಂತ ಒಟ್ಟು 81,752 ಫಲಾನುಭವಿಗಳಿದ್ದಾರೆ.

### ಪೂರಕ ಪೌಷ್ಟಿಕ ಆಹಾರ ವಿವರ

ಗರ್ಭಿಣಿ, ಬಾಣಂತಿ ಹಾಗು 6 ವರ್ಷದವರೆಗೆ ಮಗು ಆರೋಗ್ಯವಾಗಿರಬೇಕೆಂಬ ಉದ್ದೇಶದಿಂದ ಸರ್ಕಾರ ಪೂರಕ ಪೌಷ್ಟಿಕ ಆಹಾರ ವಿತರಣೆ ಯೋಜನೆ ಜಾರಿಗೊಳಿಸಿದೆ. ಅಂಗನವಾಡಿ ಕಾರ್ಯಕರ್ತೆಯರೇ ಮುತುವರ್ಜಿ ವಹಿಸಿ ತಮ್ಮ ವ್ಯಾಪ್ತಿಯ ಗರ್ಭಿಣಿ, ಬಾಣಂತಿಯರು ಹಾಗು ಮಕ್ಕಳನ್ನು ಗುರುತಿಸಿ ಅವರಿಗೆ ಪ್ರತಿ ತಿಂಗಳು ಸೌಲಭ್ಯ ಕಲ್ಪಿಸಬೇಕು. 3 ವರ್ಷದೊಳಗಿನ ಮಕ್ಕಳಿಗೆ ಪುಷ್ಟಿ ಪುಡಿ, ಹಾಲಿನ ಪುಡಿ, ಬೆಲ್ಲ ಹಾಗು ಅಪೌಷ್ಟಿಕತೆಯಿಂದ ಮಗು ಬಳಲುತ್ತಿದ್ದರೆ ವಾರದಲ್ಲಿ 3 ದಿನ ಮೊಟ್ಟೆ ನೀಡಲಾಗುತ್ತದೆ. ಮೂರು ವರ್ಷದಿಂದ ಆರು ವರ್ಷದೊಳಗಿನ ಮಗು ಅಂಗನವಾಡಿಗೆ ಬರಲಿದ್ದು, ಅಂತಹವರಿಗೆ 150 ಮಿಲಿ ಲೀ. ಹಾಲು, ಮಿಲೆಟ್ ಲಡ್ಡು, ಅನ್ನ-ಸಾಂಬಾರು ಹಾಗು ಉಪ್ಪಿಟ್ಟು, ವಾರದಲ್ಲಿ ಎರಡು ದಿನ ಮೊಟ್ಟೆ ನೀಡಲಾಗುತ್ತದೆ. ಗರ್ಭಿಣಿ ಹಾಗು ಬಾಣಂತಿಯರಿಗೆ 1 ಕೆ.ಜಿ.ಅಕ್ಕಿ, 250 ಗ್ರಾಂ ಹೆಸರು ಕಾಳು, ಗೋಧಿ 750 ಗ್ರಾಂ, ಸಾಂಬಾರ್ ಪುಡಿ 125 ಗ್ರಾಂ, ಅರ್ಧ ಕೆ.ಜಿ. ಹಾಲಿನ ಪುಡಿ ಮತ್ತು 25 ಮೊಟ್ಟೆ ನೀಡಲಾಗುವುದು.

### ಸ್ಪಂದಿಸದ ಸರ್ಕಾರ : ಬಗೆಹರಿಯದ ಸಮಸ್ಯೆ

ಮೊಟ್ಟೆ, ಬೇಳೆ ಪದಾರ್ಥಗಳ ಬೆಲೆ ಗಗನಕ್ಕೇರಿದ್ದರೂ ಸರ್ಕಾರ ಅದಕ್ಕನುಗುಣವಾಗಿ ಹಣ ನೀಡದಿರುವುದು ಬಗೆಹರಿಸಲಾಗದ ಸಮಸ್ಯೆಯಾಗಿ ಕಾಡುತ್ತಿದೆ. ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ನಿಗದಿತ ಹಣ ಮಾತ್ರ ಅಂಗನವಾಡಿಗಳಿಗೆ ದೊರೆಯುತ್ತದೆ. ಪ್ರತಿ ಮೊಟ್ಟೆ ದರ 2 ರೂ. ಏರಿಕೆಯಾಗಿರುವುದರಿಂದ ನಿಯಮದಂತೆ ಫಲಾನುಭವಿಗಳಿಗೆ ತಿಂಗಳಿಗೆ 25 ಮೊಟ್ಟೆ ವಿತರಿಸಲು ಆಗುತ್ತಿಲ್ಲ. ಕೆಲವರು ವಾಸ್ತವ ಸ್ಥಿತಿ ಅರಿತು ಸುಮ್ಮನಾದರೆ ಮತ್ತೆ ಕೆಲವರು ಅಂಗನವಾಡಿ ಸಿಬ್ಬಂದಿ ವಿರುದ್ಧವೇ ಅವ್ಯವಹಾರದ ಆರೋಪ ಮಾಡುತ್ತಿದ್ದಾರೆ. ಇಂತಹ ಸಮಸ್ಯೆಗಳು ಜಿಲ್ಲೆಯ ಹಲವೆಡೆ ಕೇಳಿಬಂದಿದೆ. ಅದರಿಂದ ಅಂಗನವಾಡಿ ಸಿಬ್ಬಂದಿ ಕೂಡ ನಿಸ್ಸಹಾಯಕರಾಗಿದ್ದಾರೆ. ಪ್ರಸ್ತುತ ಮಾರುಕಟ್ಟೆ ಬೆಲೆ ಆಧರಿಸಿ ಹಣ ನೀಡಬೇಕೆಂಬ ಆಗ್ರಹ ಕೇಳಿ ಬಂದಿದೆ. ಈ ಬಗ್ಗೆ ಅಂಗನವಾಡಿ ನೌಕರರು ಸರ್ಕಾರಕ್ಕೆ ಪತ್ರ ಬರೆದರೂ ಸಕಾರಾತ್ಮಕ ಸ್ಪಂದನೆ ಸಿಕ್ಕಿಲ್ಲ.

### ಕಾವೇರಿ ಸೇತುವೆ ಕಾಮಗಾರಿ ಪರಿಶೀಲಿಸಿದ ಎ.ಮಂಜು



• ಪ್ರಜೋದಯ ವರದಿ

**ರಾಮನಾಥಪುರ:** ಕಾವೇರಿ ನದಿಯ ಮೇಲಿನ ಸೇತುವೆ ನಿರ್ಮಾಣ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿರುವುದು ಹಾಗು ಸೇತುವೆಯ ಎರಡೂ ಬದಿಗಳ ರಸ್ತೆ ಕಾಮಗಾರಿಯನ್ನು ಅವೈಜ್ಞಾನಿಕವಾಗಿ ಕೈಗೊಳ್ಳಲಾಗುತ್ತಿದೆ ಎಂಬ ಸಾರ್ವಜನಿಕರ ದೂರಿನ ಹಿನ್ನಲೆಯಲ್ಲಿ ಶಾಸಕ ಎ. ಮಂಜು ಅವರು ಸ್ಥಳ ಪರಿಶೀಲನೆ ನಡೆಸಿದರು.

ಕಾಮಗಾರಿ ಸ್ಥಳದಲ್ಲೇ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ ಅವರು, ವೈಜ್ಞಾನಿಕ ಹಾಗು ಗುಣಮಟ್ಟದ ಮಾನದಂಡಗಳನ್ನು ಪಾಲಿಸಿ ರಸ್ತೆ ಕಾಮಗಾರಿ ಕೈಗೊಳ್ಳಬೇಕು. ಸೇತುವೆ ನಿರ್ಮಾಣ ಕಾಮಗಾರಿ ವಿಳಂಬ ಮಾಡದೆ ತ್ವರಿತವಾಗಿ ಪೂರ್ಣಗೊಳಿಸಿ, 15 ದಿನಗಳೊಳಗೆ ಸೇತುವೆಯನ್ನು ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

# ಪಾಲಿಕೆ ಅಭಿವೃದ್ಧಿಗೆ 200 ಕೋ.ರೂ. ಭರವಸೆ

## ಮೊದಲ ಹಂತವಾಗಿ 60 ಕೋ.ರೂ. ಬಿಡುಗಡೆ ನಿರೀಕ್ಷೆ: ಹೆಚ್.ಪಿ.ಸ್ವರೂಪ್

• ಪ್ರಜೋದಯ ವರದಿ

**ಹಾಸನ:** ಮಹಾನಗರ ಪಾಲಿಕೆಯ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ 200 ಕೋ.ರೂ. ಅನುದಾನ ನೀಡುವುದಾಗಿ ಭರವಸೆ ನೀಡಿದ್ದು, ಅದರ ಮೊದಲ ಹಂತವಾಗಿ 60 ಕೋ.ರೂ. ಶೀಘ್ರದಲ್ಲೇ ಬಿಡುಗಡೆಯಾಗುವ ನಿರೀಕ್ಷೆ ಇದೆ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ತಿಳಿಸಿದರು.

ನಗರದ ಕುವೆಂಪು ವೃತ್ತದ ಶಕ್ತಿ ಗಣಪತಿ ದೇವಸ್ಥಾನದ ಸಮೀಪ 30 ಲ.ರೂ. ವೆಚ್ಚದ ಯುಜಿಡಿ (ಒಳಚರಂಡಿ) ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಗುರುವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಅನುದಾನ ಬಿಡುಗಡೆಯಾದ ನಂತರ ನಗರದ ರಸ್ತೆ, ಒಳಚರಂಡಿ, ಕುಡಿಯುವ ನೀರು ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ವೇಗ ನೀಡಲಾಗುವುದೆಂದು ಹೇಳಿದರು.



ನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಹಲವು ಗ್ರಾಮಗಳು ಸೇರ್ಪಡೆಯಾಗಿರುವ ಹಿನ್ನಲೆ ಮೂಲ

» ನಾಲ್ಕನೇ ಪುಟದಲ್ಲಿ

### ಕೆಪಿಎಸ್‌ಸಿ ಹಗರಣ: ಕಾಂಗ್ರೆಸ್‌ಗೆ ಜೋಶಿ ತರಾಟೆ

**ನವದೆಹಲಿ:** ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಬಗ್ಗೆ ಹೋರಾಟ ಮಾಡುತ್ತಿರುವ ಸಂಸದ ರಾಹುಲ್ ಗಾಂಧಿ ಅವರು ಕರ್ನಾಟಕದ ಕೆಪಿಎಸ್‌ಸಿ ಕರ್ಮಕಾಂಡದ ಬಗ್ಗೆ ಏಕೆ ಮಾತನಾಡುತ್ತಿಲ್ಲವೆಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ತರಾಟೆಗೆ ತೆಗೆದುಕೊಂಡಿದ್ದಾರೆ.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ವಿಪಕ್ಷಗಳು ರಾಷ್ಟ್ರೀಯ ಪರೀಕ್ಷೆ ವಿಷಯದಲ್ಲಿ ರಾಜಕೀಯ ಮಾಡುತ್ತಿವೆ. ನೀಟ್ ವಿವಾದ ಕುರಿತು ಸಂಸತ್ತಿನಲ್ಲಿ ಮುಕ್ತ ಚರ್ಚೆಗೆ ಕೇಂದ್ರ ಸರ್ಕಾರ ಸಿದ್ಧವಿದೆ. ಅದಕ್ಕೆ ಅಖಿಲೇಶ್ ಯಾದವ್ ಸೇರಿ ಹಲವು ವಿಪಕ್ಷ ನಾಯಕರು ಸಮ್ಮತಿಸಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ಎಲ್ಲರೂ ಒಟ್ಟಾಗಿ ಚರ್ಚೆಯಲ್ಲಿ ಭಾಗವಹಿಸಬೇಕೆಂದರು.

## ತಾಯಿಯ ಸೇವೆ, ತ್ಯಾಗ ಸ್ಮರಿಸಿದ ಪುತ್ರ| ಅಂತ್ಯಕ್ರಿಯೆಗೆ ಸಹಕರಿಸಿದವರಿಗೆ ಕೃತಜ್ಞತೆ ಸಲ್ಲಿಕೆ

# ನನ್ನ ದೇವತೆಯನ್ನು ಕಳೆದುಕೊಂಡಿದ್ದೇನೆ: ರೇವಣ್ಣ ಕಣ್ಣೀರು

• ಪ್ರಜೋದಯ ವರದಿ

**ಹಾಸನ:** ನಮ್ಮ ಕುಟುಂಬದ ಏಳಿಗೆ, ಹೆಚ್.ಡಿ.ದೇವೇಗೌಡರ ರಾಜಕೀಯದಲ್ಲಿ ತಾಯಿ ಚನ್ನಮ್ಮ ಅವರ ಪಾತ್ರ ಅಪಾರವಾಗಿತ್ತು. ನಾನು ನನ್ನ ದೇವತೆಯನ್ನು ಕಳೆದುಕೊಂಡಿದ್ದೇನೆಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ತಾಯಿಯನ್ನು ನೆನೆದು ಕಣ್ಣೀರಿಟ್ಟರು.

ಗುರುವಾರ ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ತಂದೆ-ತಾಯಿ 72 ವರ್ಷಗಳ ದಾಂಪತ್ಯ ಜೀವನ ನಡೆಸಿದರು. ನಮ್ಮ ತಾಯಿ ಎಂದಿಗೂ ಪ್ರಚಾರ ಬಯಸಲಿಲ್ಲ. ಮನೆಯಲ್ಲೇ ಇದ್ದು ಕುಟುಂಬದ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಮನೆಗೆ ಯಾರೇ ಬಂದರೂ ಊಟ ಮಾಡಿಸಿ ಕಳುಹಿಸುತ್ತಿದ್ದರು. ಕಷ್ಟದಲ್ಲಿದ್ದವರಿಗೆ ನೆರವಾಗುತ್ತಿದ್ದರು. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ಸಹಾಯ ಮಾಡಿದ್ದಾರೆ. ಉದ್ಯೋಗ ಕೊಡಿಸಲು ನೆರವಾಗಿದ್ದರೆಂದು ಭಾವುಕರಾದರು.

1962ರಲ್ಲಿ ತಮ್ಮ ತಂದೆ ಹತ್ತು ರೂಪಾಯಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ಸಂದರ್ಭದ ನೆನಪುಗಳನ್ನು ಹಂಚಿ ಕೊಂಡ ಅವರು,



ದೇವೇಗೌಡರು ಶಾಸಕರಾದ ಬಳಿಕ ಕುಟುಂಬದ ಕೊನೆಯ ಮಗಳು ಜನಿಸಿದ್ದಳು. ಆದ್ದರಿಂದ ತಾಯಿಯ ಪಾರ್ಥಿವ ಶರೀರದ ಅಂತಿಮ ಯಾತ್ರೆಯಲ್ಲಿ ಆ ಬಾಡಿಗೆ ಮನೆಯ ಸಮೀಪಕ್ಕೂ ಕೊಂಡೊಯ್ಯಲಾಯಿತು. ಹೋದ ಕಡೆ ಮಡಿಲಕ್ಕಿ ಕೊಟ್ಟು ಗೌರವಿಸಿದರೆಂದು ಸ್ಮರಿಸಿದರು.

ಸಾಮಾನ್ಯ ಪಟೇಲ್ ಕುಟುಂಬದಲ್ಲಿ ಹುಟ್ಟಿದರೂ, ನಮ್ಮ ತಂದೆ ಏಳಿಗೆಯಲ್ಲಿ, ನಮ್ಮ ಬೆಳವಣಿಗೆಯಲ್ಲಿ ನಮ್ಮ ತಾಯಿ ಪಾತ್ರ ಪ್ರಮುಖವಾಗಿದೆ. ಪಡುವಲಹಿಪ್ಪೆ ಗ್ರಾಮದಲ್ಲಿ 12 ಎಕರೆ ಜಮೀನನ್ನು ಖರೀದಿಸುವ ಸಂದರ್ಭದಲ್ಲಿ ತಾಯಿ ತಮ್ಮ ಆಭರಣಗಳನ್ನು ಅಡವಿಟ್ಟು ಸಹಕರಿಸಿದ್ದರು. ಆದರೆ,

» ನಾಲ್ಕನೇ ಪುಟದಲ್ಲಿ

### ಆರಾಧನಾ ಮಹೋತ್ಸವಕ್ಕೆ ಆಹ್ವಾನ

ರಾಜಕೀಯ ಬೇರೆ, ಆದರೆ ಮಾನವೀಯತೆ ದೊಡ್ಡದು. ಮುಖ್ಯಮಂತ್ರಿ ಸರ್ಕಾರಿ ಗೌರವ ನೀಡಿ ಮಾನವೀಯತೆ ತೋರಿದ್ದಾರೆ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಜುಲೈ 30ರಂದು ಆರಾಧನಾ ಮಹೋತ್ಸವ ನಡೆಯಲಿದ್ದು, ಪಕ್ಷಭೇದವಿಲ್ಲದೆ ಎಲ್ಲರೂ ಭಾಗವಹಿಸಬೇಕೆಂದು ಹೆಚ್.ಡಿ.ರೇವಣ್ಣ ಅವರು ಮನವಿ ಮಾಡಿದರು.

### ತಾಯಿ ಕೊನೆಯ ಕ್ಷಣ ನೆನೆದು ಭಾವುಕ

ತಾಯಿ ಕೊನೆಯ ಕ್ಷಣಗಳನ್ನು ಸ್ಮರಿಸಿದ ರೇವಣ್ಣ ಅವರು, ಶನಿವಾರ ಸಂಜೆ 3.45 ರ ಸುಮಾರಿಗೆ ನಮ್ಮ ತಂದೆ ಬಂದು ಕುಂಕುಮ ಇಟ್ಟು, ಹೂವು ಮುಡಿಸಿದ ನಂತರವೇ ತಾಯಿ ಕೊನೆಯುಸಿರೆಳೆದರು. ಇಂತಹ ಮರಣ ಎಲ್ಲರಿಗೂ ಸಿಗುವುದಿಲ್ಲವೆಂದು ಕಣ್ಣೀರಿಟ್ಟರು. 2001ರಲ್ಲಿ ತಮ್ಮ ತಾಯಿ ಮೇಲೆ ನಡೆದಿದ್ದ ಆಸಿಡ್ ದಾಳಿ ನಡೆಯದಿದ್ದರೆ ಅವರಿಗೆ ಇಷ್ಟು ಬೇಗ ಸಾವು ಬರುತ್ತಿರಲಿಲ್ಲವೆಂದು ಹೆಚ್.ಡಿ. ರೇವಣ್ಣ ಅವರು ಹೇಳಿದರು.

# ನಿಯಮ ಉಲ್ಲಂಘಿಸಿದ ಮದ್ಯದಂಗಡಿಗಳ ವಿರುದ್ಧ ದೂರು ದಾಖಲು



• ಪ್ರಜೋದಯ ವರದಿ

**ಹೊಳೆನರಸೀಪುರ:** ಮದ್ಯ ಮಾರಾಟ ಮಳಿಗೆಗಳ ಮೇಲೆ ದಿಢೀರ್ ದಾಳಿ ನಡೆಸಿದ ಅಬಕಾರಿ ಆಯುಕ್ತೆ ಡಿ. ರೂಪ ನೇತೃತ್ವದ ತಂಡ ನಿಯಮ ಪಾಲಿಸದ ಹಿನ್ನಲೆಯಲ್ಲಿ 11 ಮದ್ಯದಂಗಡಿಗಳ ವಿರುದ್ಧ ದೂರು ದಾಖಲಿಸಿದೆ.

ಸರ್ಕಾರದ ಆದೇಶದಂತೆ ಮದ್ಯದಂಗಡಿಗಳ ನಿರ್ವಹಣೆಯಲ್ಲಿನ ಲೋಪದೋಷಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗಿದೆ. ತಾಲ್ಲೂಕಿನಲ್ಲಿ ಒಟ್ಟು 43 ಅಬಕಾರಿ ಪರವಾನಗಿ ಪಡೆದ ಮದ್ಯ ಮಾರಾಟದ ಅಂಗಡಿಗಳಿವೆ. ಅವುಗಳಲ್ಲಿ 11 ಮಳಿಗೆಗಳ ಮೇಲೆ ಪ್ರಕರಣ ದಾಖಲಿಸಿದೆ. ಕೌಂಟರ್‌ನಲ್ಲೇ ಕುಡಿಯಲು ನೀಡುವ, ಸ್ವಚ್ಛತೆ ನಿರ್ವಹಣೆ ಕೊರತೆ, ರೆಸ್ಟೋರೆಂಟ್‌ಗಳಲ್ಲಿ ಉತ್ತಮ ವಾತಾವರಣ ಇಲ್ಲದಿರುವವ ಮಳಿಗೆಗಳಿಗೆ ನೋಟೀಸ್ ನೀಡಲಾಗಿದೆ.

ಮುಖ್ಯವಾಗಿ ನಿಗದಿತ ಎಂಆರ್‌ಪಿಗಿಂತಲೂ ಅಧಿಕ ಹಣಕ್ಕೆ ಮಾರಾಟ ಮಾಡುತ್ತಿರುವ ಅಂಗಡಿಗಳ ಮೇಲೂ ತೀವ್ರ ಕ್ರಮ ಕೈಗೊಳ್ಳಲಾಗಿದೆ. ಪರವಾನಗಿ ಪಡೆಯುವಾಗ ನೀಡಿರುವ ನೀಲ ನಕ್ಷೆಯಲ್ಲಿ ಬದಲಾವಣೆ, ರೆಸ್ಟೋರೆಂಟ್ ಮತ್ತು ಬಾರ್‌ಗಳಲ್ಲಿ ಸರಿಯಾಗಿ ವ್ಯವಸ್ಥೆ ಮಾಡದಿರುವ ಸನ್ನದುದಾರರ ಮೇಲೂ ಕ್ರಮ

» ನಾಲ್ಕನೇ ಪುಟದಲ್ಲಿ

E-mail : prajodayahsn@gmail.com

ಪ್ರಜೋದಯ

24 ಜುಲೈ 2026 ಶುಕ್ರವಾರ

# ಸಿನಿ ಪ್ರಜಾ

# ಈ ವಾರ ನಿರೀಕ್ಷೆ ಹೆಚ್ಚಿಸಿರುವ ಆಸಕ್ತಿಕರ ಸಿನಿಮಾಗಳು

ಮತ್ತೊಂದು ಶುಕ್ರವಾರ ಹತ್ತಿರವಾಗಿದೆ. ಪ್ರತಿ ವಾರದಂತೆ ಈ ವಾರವೂ ಸಹ ಹಲವು ಹೊಸ ಸಿನಿಮಾಗಳು, ಹೊಸ ಕನಸುಗಳ ಜೊತೆಗೆ, ಹೊಸ ನಿರೀಕ್ಷೆಗಳ ಜೊತೆಗೆ, ಕಾತರತೆಯ ಜೊತೆಗೆ ಚಿತ್ರಮಂದಿರಗಳಲ್ಲಿ ಬಿಡುಗಡೆ ಆಗುತ್ತಿವೆ. ಈ ವಾರ ಕೆಲ ಆಸಕ್ತಿಕರ, ಭಾರಿ ನಿರೀಕ್ಷೆ ಮೂಡಿಸಿರುವ ಸಿನಿಮಾಗಳು ತೆರೆಗೆ ಬರುತ್ತಿವೆ. ಕನ್ನಡದ ಒಂದು ಬಹು ನಿರೀಕ್ಷಿತ ಸಿನಿಮಾದ ಜೊತೆಗೆ ಪರ ಭಾಷೆಯ ಕೆಲವು ಸಿನಿಮಾಗಳು ಸಹ ಬಿಡುಗಡೆ ಆಗುತ್ತಿದ್ದು, ಪಟ್ಟಿ ಇಲ್ಲಿದೆ ನೋಡಿ...

ಪ್ರಜ್ವಲ್ ದೇವರಾಜ್, ರಾಜ್ ಬಿ ಶೆಟ್ಟಿ, ಮಿತ್ರ, ರಮೇಶ್ ಇಂದಿರಾ, ಸಂಪದಾ ಸೇರಿ ಹಲವು ಪ್ರತಿಭಾವಂತ ನಟ, ನಟಿಯರು ಒಟ್ಟಿಗೆ ಸೇರಿ ನಟಿಸಿರುವ ಕರಾವಳಿ ಸಿನಿಮಾ ಈ ವಾರ ಬಿಡುಗಡೆ ಆಗುತ್ತಿದೆ. ಸಿನಿಮಾ ಅನ್ನು ಗುರುದತ್ ಗಾಣಿಗಾ ನಿರ್ದೇಶನ ಮಾಡಿದ್ದು ಸಿನಿಮಾದ ಬಗ್ಗೆ ಸಾಕಷ್ಟು ನಿರೀಕ್ಷೆಗಳಿವೆ. ಇದೇ ಶುಕ್ರವಾರ ಸಿನಿಮಾ ಬಿಡುಗಡೆ ಆಗುತ್ತಿದೆ.

ವಿಜಯ್ ರಾಘವೇಂದ್ರ ಮುಖ್ಯ ಪಾತ್ರದಲ್ಲಿ ನಟಿಸಿರುವ ಶ್ರೀಮತಿ ಸಿಂಧೂರ ಸಿನಿಮಾ ಇದೇ ವಾರ ತೆರೆಗೆ ಬರಲಿದೆ ಎನ್ನಲಾಗುತ್ತಿದೆ. ಈ ಸಿನಿಮಾ ದೈವ ಭಕ್ತಿಯ ಕತೆಯನ್ನು ಒಳಗೊಂಡಿದೆ. ವಿಜಯ್ ರಾಘವೇಂದ್ರ ಜೊತೆಗೆ ಪ್ರಿಯಾ ಅವರು ನಾಯಕಿಯಾಗಿ ನಟಿಸಿದ್ದಾರೆ.

ತಮಿಳುನಾಡು ಸಿಎಂ ವಿಜಯ್ ನಟಿಸಿರುವ ಜನ ನಾಯಗನ್ ಸಿನಿಮಾ ಹಲವಾರು ಅಡೆ-ತಡೆಗಳ ಬಳಿಕ ಕೊನೆಗೂ ಈ ವಾರ ಬಿಡುಗಡೆ ಆಗುತ್ತಿದೆ. ಜನವರಿ ತಿಂಗಳಲ್ಲಿ ಬಿಡುಗಡೆ ಆಗಬೇಕಿದ್ದ ಈ ಸಿನಿಮಾ ಸಾಕಷ್ಟು ಸಮಸ್ಯೆಗಳನ್ನು ಎದುರಿಸಿ ಇದೀಗ ಚಿತ್ರಮಂದಿರಕ್ಕೆ ಬಂದಿದೆ. ಗುರುವಾರ (ಜುಲೈ 23) ಈ ಸಿನಿಮಾ ರಿಲೀಸ್ ಆಗಲಿದೆ. ಸಿನಿಮಾನಲ್ಲಿ ಪೂಜಾ ಹೆಗ್ಡೆ, ಮಮಿತಾ ಬಿಜು ನಟಿಸಿದ್ದಾರೆ.

ಈ ವಾರ ತೆಲುಗಿನ ಯುವ ಪ್ರೇಮಕತೆಯೊಂದು ರಿಲೀಸ್ ಆಗುತ್ತಿದೆ. ಸಿನಿಮಾದ ಹೆಸರು ಚೆನ್ನೈ ಲವ್ ಸ್ಟೋರಿ. ಕಿರಣ್ ಅಬ್ಬವರಂ, ಶ್ರೀ ಗೌರಿ ನಾಯಕ-ನಾಯಕಿಯಾಗಿ ನಟಿಸಿರುವ ಸಿನಿಮಾ ಇದಾಗಿದ್ದು, ಸಿನಿಮಾದ ಬಗ್ಗೆ ಈಗಾಗಲೇ ಧನಾತ್ಮಕ ಅಭಿಪ್ರಾಯಗಳು ವ್ಯಕ್ತವಾಗಿದೆ. ಸಿನಿಮಾದ ಟ್ರೈಲರ್ ಸಹ ವೈರಲ್ ಆಗಿದೆ.

ಬಾಲಿವುಡ್ ನಟಿ, ಮಾಜಿ ಬಿಗ್‌ಬಾಸ್ ಸ್ಪರ್ಧಿ ಶೆಹನಾಜ್ ಗಿಲ್ ಮುಖ್ಯ ಪಾತ್ರದಲ್ಲಿ ನಟಿಸಿರುವ ಪ್ರೇಮ ಕಥಾ ಸಿನಿಮಾ ಇಷ್ಕ್‌ನಾಮಾ ಈ ವಾರ ಚಿತ್ರಮಂದಿರಗಳಲ್ಲಿ ಬಿಡುಗಡೆ ಆಗಿದೆ. ಶೆಹನಾಜ್ ಅವರು ಸಿನಿಮಾದ ಬಗ್ಗೆ ಭಾರಿ ನಿರೀಕ್ಷೆ ಇರಿಸಿಕೊಂಡಿರುವುದಾಗಿ ಹೇಳಿದ್ದಾರೆ.



# 2026 ರಲ್ಲಿ ಬಿಡುಗಡೆಯಾಗಲಿರುವ ಕನ್ನಡ ಚಲನಚಿತ್ರಗಳು

## ಅಯೋಗ್ಯ 2, ಪಿನಾಕ, ಟಾಕ್ಸಿಕ್, ಬೇಲ್, ಬೃಂದಾವಿಹಾರಿ, ಬಿಡುಗಡೆ ದಿನಾಂಕ ಇಲ್ಲಿದೆ

ಕನ್ನಡ ಚಿತ್ರರಂಗವು ಮುಂಬರುವ ತಿಂಗಳುಗಳಲ್ಲಿ ಬಿಡುಗಡೆಯಾಗಲಿರುವ ವೈವಿಧ್ಯಮಯ ಚಿತ್ರಗಳ ಸರಣಿಯೊಂದಿಗೆ ತನ್ನ ಪರಿಧಿಯನ್ನು ವಿಸ್ತರಿಸುತ್ತಲೇ ಇದೆ. ಆಕ್ಷನ್-ಪ್ಯಾಕ್ಡ್ ಥ್ರಿಲ್ಲರ್‌ಗಳಿಂದ ಹಿಡಿದು ಭಾವನಾತ್ಮಕ ನಾಟಕಗಳವರೆಗೆ, ಸ್ಯಾಂಡಲ್‌ವುಡ್ ಹೊಸ ಕಥೆಗಳು ಮತ್ತು ಪ್ರಭಾವಶಾಲಿ ಅಭಿನಯಗಳೊಂದಿಗೆ ಪ್ರೇಕ್ಷಕರನ್ನು ರಂಜಿಸಲು ಸಜ್ಜಾಗಿದೆ. ಮುಂಬರುವ ಕನ್ನಡ ಚಲನಚಿತ್ರಗಳು ಮತ್ತು ಅವುಗಳ ಬಿಡುಗಡೆ ದಿನಾಂಕಗಳ ವಿವರವಾದ ನೋಟ ಇಲ್ಲಿದೆ.

**ಕರಾವಳಿ ಜುಲೈ 24, 2026**

ಬಹು ನಿರೀಕ್ಷಿತ ಚಿತ್ರ ಕರಾವಳಿ ಜುಲೈ 24 ರಂದು ಬಿಡುಗಡೆಯಾಗಲಿದೆ. ಕರಾವಳಿ ಹಿನ್ನೆಲೆ ಮತ್ತು ರೋಮಾಂಚಕ ಕಥಾಹಂದರ ಹೊಂದಿರುವ ಈ ಚಿತ್ರವು ಕರ್ನಾಟಕದ ಕರಾವಳಿ ಪ್ರದೇಶದ ಶ್ರೀಮಂತ ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರದರ್ಶಿಸುವ ನಿರೀಕ್ಷೆಯಿದೆ. ಈ ನಿರೂಪಣೆಯು ಸ್ಥಳೀಯ ಸಂಪ್ರದಾಯಗಳನ್ನು ಸಿನಿಮೀಯ ಕಥೆ ಹೇಳುವಿಕೆಯೊಂದಿಗೆ ಹೇಗೆ ಸಂಯೋಜಿಸುತ್ತದೆ ಎಂಬುದನ್ನು ನೋಡಲು ಅಭಿಮಾನಿಗಳು ಕಾತರದಿಂದ ಕಾಯುತ್ತಿದ್ದಾರೆ.

**ಅಯೋಗ್ಯ 2 ಆಗಸ್ಟ್ 2026**

ಹಿಂದಿನ ಚಿತ್ರದ ಯಶಸ್ಸಿನ ನಂತರ, ಅಯೋಗ್ಯ 2 ಆಗಸ್ಟ್‌ನಲ್ಲಿ ಬಿಡುಗಡೆಯಾಗಲಿದೆ. ಈ ಚಿತ್ರವು ಹೈ-ಆಕ್ಟೇನ್ ನಾಟಕ ಮತ್ತು ಆಕ್ಷನ್ ಸನ್ನಿವೇಶಗಳನ್ನು ನೀಡುವ ಭರವಸೆ ನೀಡುತ್ತದೆ, ಇದು ಕನ್ನಡ ಚಿತ್ರರಂಗದ ಬಹುನಿರೀಕ್ಷಿತ ಉತ್ತರಭಾಗಗಳಲ್ಲಿ ಒಂದಾಗಿದೆ. ಈ ಕಂತು ಮೂಲವು ನಿಗದಿಪಡಿಸಿದ ನಿರೀಕ್ಷೆಗಳನ್ನು ಮೀರಿಸುತ್ತದೆ ಎಂದು ತಯಾರಕರು ವಿಶ್ವಾಸ ಹೊಂದಿದ್ದಾರೆ.

**ಪಿನಾಕ ಆಗಸ್ಟ್ 2, 2026**

ಪಿನಾಕ ಆಗಸ್ಟ್ 2 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಪುರಾಣಗಳಿಂದ ಪ್ರೇರಿತವಾದ ಕುತೂಹಲಕಾರಿ ಶೀರ್ಷಿಕೆ ಯೊಂದಿಗೆ, ಈ ಚಿತ್ರವು ಸಂಪ್ರದಾಯ ಮತ್ತು ಆಧುನಿಕತೆಯ ಅಂಶಗಳನ್ನು ಸಂಯೋಜಿಸುವ ನಿರೀಕ್ಷೆಯಿದೆ. ಕಥಾಹಂದರವು ಶೌರ್ಯ ಮತ್ತು ನ್ಯಾಯದ ವಿಷಯಗಳ ಸುತ್ತ ಸುತ್ತುತ್ತದೆ ಮತ್ತು ತೀವ್ರವಾದ ನಿರೂಪಣೆಯನ್ನು ಆನಂದಿಸುವ ಪ್ರೇಕ್ಷಕರನ್ನು ಆಕರ್ಷಿಸುತ್ತದೆ ಎಂದು ವದಂತಿಗಳಿವೆ.

**ವಿಷಕಾರಿ ಆಗಸ್ಟ್ 26, 2026**

ಆಗಸ್ಟ್ 26 ರಂದು, ಟಾಕ್ಸಿಕ್ ಒಂದು ದಿಟ್ಟ ಮತ್ತು ಹರಿತವಾದ ಥೀಮ್‌ನೊಂದಿಗೆ ಬಿಡುಗಡೆಯಾಗಲಿದೆ. ಈ ಚಿತ್ರವು ಸಮಾಜದ ಕತ್ತಲೆಯ ಅಂಶಗಳನ್ನು ಅನ್ವೇಷಿಸುತ್ತದೆ ಎಂದು ಹೇಳಲಾಗುತ್ತದೆ, ಇದು ಚಿಂತನೆಗೆ ಹಚ್ಚುವ ಗಡಿಯಾರವಾಗಿದೆ. ಅದರ ವಿಶಿಷ್ಟ ಪರಿಕಲ್ಪನೆಯೊಂದಿಗೆ, ಟಾಕ್ಸಿಕ್ ಈ ತಿಂಗಳ ಬಿಡುಗಡೆಗಳಲ್ಲಿ ಎದ್ದು ಕಾಣುವ ಮತ್ತು ಸಿನಿಪ್ರಿಯರಲ್ಲಿ ಸಂಭಾಷಣೆಯನ್ನು ಹುಟ್ಟುಹಾಕುವ ಸಾಧ್ಯತೆಯಿದೆ.

**ಬೇಲ್ - ಅಕ್ಟೋಬರ್ 2, 2026**

ಬೇಲ್ ಚಿತ್ರವು ಅಕ್ಟೋಬರ್ 2 ರಂದು ಗಾಂಧಿ ಜಯಂತಿಯಂದು ಬಿಡುಗಡೆಯಾಗಲಿದೆ. ಚಿತ್ರದ ಶೀರ್ಷಿಕೆಯೇ ಪಾತ್ರ ಆಧಾರಿತವಾದ ಬಲವಾದ ನಿರೂಪಣೆಯನ್ನು ಸೂಚಿಸುತ್ತದೆ ಮತ್ತು ಆರಂಭಿಕ ಸುದ್ದಿಗಳ ಪ್ರಕಾರ ಇದು ಭಾವನಾತ್ಮಕ ಆಳ ಮತ್ತು ವಾಣಿಜ್ಯ ಆಕರ್ಷಣೆಯ ಮಿಶ್ರಣವನ್ನು ಹೊಂದಿರುತ್ತದೆ. ಈ ಬಿಡುಗಡೆಯು ಚಿತ್ರಮಂದಿರಗಳಿಗೆ ಹೆಚ್ಚಿನ ಜನಸಂದಣಿಯನ್ನು ಸೆಳೆಯುವ ನಿರೀಕ್ಷೆಯಿದೆ.

**ಬೃಂದಾವಿಹಾರಿ ಅಕ್ಟೋಬರ್ 16, 2026**

ಸೀಸನ್‌ನ ಕೊನೆಯ ಸಿನಿಮಾ ಬೃಂದಾವಿಹಾರಿ ಅಕ್ಟೋಬರ್ 16 ರಂದು ಬಿಡುಗಡೆಯಾಗಲಿದೆ. ಈ ಚಿತ್ರವು ನಾಟಕ, ಸಂಗೀತ ಮತ್ತು ಸಾಂಸ್ಕೃತಿಕ ಅಂಶಗಳ ಮಿಶ್ರಣದೊಂದಿಗೆ ಒಂದು ಕೌಟುಂಬಿಕ ಮನರಂಜನೆಯ ಚಿತ್ರವಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಹಬ್ಬದ ಬಿಡುಗಡೆಯ ಸಮಯವು ಅದರ ಬಾಕ್ಸ್ ಆಫೀಸ್ ಗಳಿಕೆಯನ್ನು ಹೆಚ್ಚಿಸುವ ನಿರೀಕ್ಷೆಯಿದೆ.

ಕನ್ನಡ ಸಿನಿಮಾ ಪ್ರಿಯರು ಮುಂಬರುವ ತಿಂಗಳುಗಳಲ್ಲಿ ಬಹಳಷ್ಟು ನಿರೀಕ್ಷೆಗಳನ್ನು ಹೊಂದಿದ್ದಾರೆ. ಕರಾವಳಿ, ಅಯೋಗ್ಯ 2, ಪಿನಾಕ, ಟಾಕ್ಸಿಕ್, ಬೇಲ್ ಮತ್ತು ಬೃಂದಾವಿಹಾರಿ ಮುಂತಾದ ಚಿತ್ರಗಳು ಸಾಲಿನಲ್ಲಿ ಬರುತ್ತಿದ್ದು, ಸ್ಯಾಂಡಲ್‌ವುಡ್ ವೈವಿಧ್ಯಮಯ ಕಥೆ ಹೇಳುವಿಕೆ ಮತ್ತು ಸಿನಿಮೀಯ ಪ್ರತಿಭೆಯ ಋತುವಿಗೆ ಸಜ್ಜಾಗುತ್ತಿದೆ.




# ಸ್ಯಾಂಡಲ್‌ವುಡ್‌ಗೆ ಭರ್ಜರಿ ಸಿಹಿ ಸುದ್ದಿ




## ಸರ್ಕಾರಿ ಒಟಿಟಿ ಪ್ಲಾಟ್‌ಫಾರ್ಮ್‌ಗೆ ಚಾಲನೆ, ಚಿತ್ರರಂಗದಲ್ಲಿ ಹೊಸ ಸಂಚಲನ!

ಕನ್ನಡ ಚಿತ್ರರಂಗಕ್ಕೆ ರಾಜ್ಯ ಸರ್ಕಾರ ಭರ್ಜರಿ ಸಿಹಿ ಸುದ್ದಿ ನೀಡಿದೆ. ಸ್ಯಾಂಡಲ್‌ವುಡ್ ಸಿನಿಮಾಗಳಿಗಾಗಿಯೇ ಸರ್ಕಾರಿ ಸ್ವಾಮ್ಯದ ಒಟಿಟಿ ಪ್ಲಾಟ್‌ಫಾರ್ಮ್ ಆರಂಭಿಸಲು ಅಧಿಕೃತವಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಚಿತ್ರರಂಗದ ಪ್ರಮುಖರೊಂದಿಗೆ ನಡೆಸಿದ ಮಹತ್ವದ ಸಭೆಯಲ್ಲಿ ಈ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ್ದಾರೆ. ಜಾಗತಿಕ ಒಟಿಟಿ ಸಂಸ್ಥೆಗಳಲ್ಲಿ ಅವಕಾಶ ಸಿಗದೆ ಪರದಾಡುತ್ತಿರುವ ಸಣ್ಣ ಬಜೆಟ್ ಸಿನಿಮಾಗಳಿಗೆ ವೇದಿಕೆ ಕಲ್ಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಸರ್ಕಾರದ ಈ ನಿರ್ಧಾರವು ಕನ್ನಡ ಕಂಟೆಂಟ್ ಪ್ರೇಕ್ಷಕರನ್ನು ತಲುಪುವ ರೀತಿಯನ್ನೇ ಬದಲಿಸುವ ನಿರೀಕ್ಷೆಯಿದೆ.

ಈ ಸಭೆಯಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಸರ್ಕಾರದ ಮುಂದೆ ಹಲವು ಪ್ರಮುಖ ಬೇಡಿಕೆಗಳನ್ನು ಇಟ್ಟಿದೆ. ಸಿನಿಮಾಗಳಿಗೆ ನೀಡುವ ಸಬ್ಸಿಡಿ ಮೊತ್ತವನ್ನು ಪರಿಷ್ಕರಿಸುವುದು ಮತ್ತು ಡಿಜಿಟಲ್ ಫಿಲ್ಮ್ ಆರ್ಕೈವ್‌ಗೆ ಸುಲಭ ಪ್ರವೇಶ ನೀಡುವಂತೆ ಮನವಿ ಮಾಡಲಾಗಿದೆ. ಇದರೊಂದಿಗೆ, ನಶಿಸಿ ಹೋಗುತ್ತಿರುವ ಸಿಂಗಲ್ ಸ್ಕ್ರೀನ್ ಥಿಯೇಟರ್‌ಗಳನ್ನು ಆಧುನೀಕರಿಸುವುದು ಚಿತ್ರರಂಗದ ಮೊದಲ ಆದ್ಯತೆಯಾಗಬೇಕು ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಸಾಂಪ್ರದಾಯಿಕ ಚಿತ್ರಮಂದಿರಗಳನ್ನು ಉಳಿಸಿಕೊಂಡೇ ಹೊಸ ತಂತ್ರಜ್ಞಾನಕ್ಕೆ ತೆರೆದುಕೊಳ್ಳುವ ಸರ್ಕಾರದ ಈ ನಡೆ ಪ್ರಾದೇಶಿಕ ಚಿತ್ರರಂಗದ ಆರ್ಥಿಕತೆಗೆ ಬಲ ತುಂಬಲಿದೆ.

**ಕನ್ನಡ ಸಿನಿಮಾಗಳ ಡಿಜಿಟಲ್ ವ್ಯವಹಾರದ ಮೇಲೆ ಸರ್ಕಾರಿ ಒಟಿಟಿ ಪ್ರಭಾವ**

ಸರ್ಕಾರದ ಈ ಒಟಿಟಿ ಪ್ಲಾಟ್‌ಫಾರ್ಮ್ ಬರುವುದರಿಂದ ಸಿನಿಮಾಗಳ ಥಿಯೇಟರ್ ಪ್ರದರ್ಶನ ಮತ್ತು ಡಿಜಿಟಲ್ ಹಕ್ಕುಗಳ ವ್ಯವಹಾರದಲ್ಲಿ ದೊಡ್ಡ ಬದಲಾವಣೆಯಾಗಲಿದೆ.

ಸದ್ಯ ದೊಡ್ಡ ದೊಡ್ಡ ಅಂತರಾಷ್ಟ್ರೀಯ ಸ್ಟ್ರೀಮಿಂಗ್ ಸಂಸ್ಥೆಗಳು ಕನ್ನಡ ಸಿನಿಮಾಗಳನ್ನು ಖರೀದಿಸಲು ಹಿಂದೇಟು ಹಾಕುತ್ತಿವೆ ಅಥವಾ ವಿಳಂಬ ಮಾಡುತ್ತಿವೆ. ಇಂತಹ ಸಂದರ್ಭದಲ್ಲಿ ಕಲಾತ್ಮಕ ಮತ್ತು ವಿಭಿನ್ನ ಪ್ರಯೋಗದ ಸಿನಿಮಾಗಳಿಗೆ ಸರ್ಕಾರಿ ಒಟಿಟಿ ದೊಡ್ಡ ಆಸರೆಯಾಗಲಿದೆ. ಇದರಿಂದ ಸಾಂಸ್ಕೃತಿಕವಾಗಿ ಮಹತ್ವವಿರುವ ಸಿನಿಮಾಗಳಿಗೆ ಶಾಶ್ವತ ನೆಲೆ ಸಿಗಲಿದ್ದು, ಕಮರ್ಷಿಯಲ್ ಸಿನಿಮಾಗಳ ಹೊರತಾಗಿ ಹೊಸತನ ಬಯಸುವ ಪ್ರೇಕ್ಷಕರಿಗೆ ಉತ್ತಮ ಕಂಟೆಂಟ್ ಲಭ್ಯವಾಗಲಿದೆ.

**ಸಿಂಗಲ್ ಸ್ಕ್ರೀನ್ ಆಧುನೀಕರಣ ಮತ್ತು ಸಿನಿಮಾ ನಿಯಮಗಳು 2026**

ಚಿತ್ರಮಂದಿರಗಳ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕ ಸಿನಿಮಾ ನಿಯಮಗಳು 2026ರ ಬಗ್ಗೆಯೂ ಸಭೆಯಲ್ಲಿ ಚರ್ಚಿಸಲಾಗಿದೆ. ಸಿಂಗಲ್ ಸ್ಕ್ರೀನ್ ಥಿಯೇಟರ್‌ಗಳನ್ನು ಮಲ್ಟಿಪ್ಲೆಕ್ಸ್ ಮಾದರಿಯ ಸೌಲಭ್ಯಗಳೊಂದಿಗೆ ಮೇಲ್ದರ್ಜೆಗೇರಿಸುವ ಯೋಜನೆ ಇದಾಗಿದೆ. ಸುಸಜ್ಜಿತ ಸೀಟುಗಳು ಮತ್ತು ಅತ್ಯಾಧುನಿಕ ಸೌಂಡ್ ಸಿಸ್ಟಮ್ ಅಳವಡಿಸುವ ಮೂಲಕ ಯುವ ಪ್ರೇಕ್ಷಕರನ್ನು ಮತ್ತೆ ಥಿಯೇಟರ್‌ಗಳತ್ತ ಸೆಳೆಯುವುದು ಇದರ ಗುರಿ. ಸರ್ಕಾರದ ಧನಸಹಾಯದೊಂದಿಗೆ ನಡೆಯುವ ಈ ನವೀಕರಣ ಕಾರ್ಯವು, ಡಿಜಿಟಲ್ ಯುಗದಲ್ಲಿ ಚಿತ್ರಮಂದಿರಗಳು ಅಸ್ತಿತ್ವ ಉಳಿಸಿಕೊಳ್ಳಲು ಸಹಕಾರಿಯಾಗಲಿದೆ.

ಮುಂದಿನ ಕೆಲವು ತಿಂಗಳುಗಳಲ್ಲಿ ಒಟಿಟಿ ನೀತಿಯ ಅಂತಿಮ ರೂಪರೇಷೆ ಸಿದ್ಧವಾಗುವ ಸಾಧ್ಯತೆಯಿದೆ. ಇದು ನಿರ್ಮಾಪಕರಲ್ಲಿ ಆರ್ಥಿಕ ಭದ್ರತೆಯ ಭರವಸೆ ಮೂಡಿಸಿದೆ. ಸೃಜನಶೀಲರು ಮತ್ತು ಪ್ರೇಕ್ಷಕರ ನಡುವಿನ ಕಂದಕವನ್ನು ಕಡಿಮೆ ಮಾಡುವ ಮೂಲಕ ಕರ್ನಾಟಕ ಸರ್ಕಾರ ದೇಶದಲ್ಲೇ ಹೊಸ ಮಾದರಿಯನ್ನು ಸೃಷ್ಟಿಸುತ್ತಿದೆ.

ಈ ಯೋಜನೆ ಯಶಸ್ವಿಯಾದರೆ ಭಾರತದ ಇತರ ಪ್ರಾದೇಶಿಕ ಚಿತ್ರರಂಗಗಳಿಗೂ ಇದು ಪ್ರೇರಣೆಯಾಗಲಿದೆ. ಚಿತ್ರರಂಗದ ಭವಿಷ್ಯವನ್ನೇ ಬದಲಿಸಬಲ್ಲ ಈ ಡಿಜಿಟಲ್ ಕ್ರಾಂತಿಯ ಅಧಿಕೃತ ಜಾರಿಗೆ ಈಗ ಎಲ್ಲರೂ ಕಾತರದಿಂದ ಕಾಯುತ್ತಿದ್ದಾರೆ.

# ಹೀರೋಗಳೇ, ಕ್ಯಾರವಾನ್ ಬಿಟ್ಟು ಆಚೆ ಬನ್ನಿ, ಸಿನಿಮಾ ನಿರ್ಮಿಸಿ : ನಿರ್ಮಾಪಕ ರಮೇಶ್ ಯಾದವ್

ಸಿನಿಮಾರಂಗ ಬಹಳ ಪವರ್‌ಫುಲ್ ಕ್ಷೇತ್ರ. ನಟನೊಬ್ಬನನ್ನು ಮುಖ್ಯಮಂತ್ರಿ ಮಾಡಿಸುವಷ್ಟು ಪವರ್ ಇಲ್ಲಿದೆ. ಜೊತೆಗೆ ಇದೊಂದು ಉದ್ಯಮ. ಇಲ್ಲಿ ಬಂಡವಾಳ ಹೂಡುವ ನಿರ್ಮಾಪಕ ಬಿಸಿನೆಸ್ ಮೈಂಡ್ ಸೆಟ್‌ನಲ್ಲೂ ಯೋಚಿಸಬೇಕಾಗುತ್ತದೆ.

**ನಿರ್ಮಾಪಕರಲ್ಲಿ ಸಣ್ಣ ದೊಡ್ಡ ಎಂಬ ವ್ಯತ್ಯಾಸ ಬೇಡ**

1. ಸಿನಿಮಾರಂಗ ಬಹಳ ಪವರ್‌ಫುಲ್ ಕ್ಷೇತ್ರ. ನಟನೊಬ್ಬನನ್ನು ಮುಖ್ಯಮಂತ್ರಿ ಮಾಡಿಸುವಷ್ಟು ಪವರ್ ಇಲ್ಲಿದೆ. ಜೊತೆಗೆ ಇದೊಂದು ಉದ್ಯಮ. ಇಲ್ಲಿ ಬಂಡವಾಳ ಹೂಡುವ ನಿರ್ಮಾಪಕ ಬಿಸಿನೆಸ್ ಮೈಂಡ್‌ಸೆಟ್‌ನಲ್ಲೂ ಯೋಚಿಸಬೇಕಾಗುತ್ತದೆ. ಮೊನ್ನೆ ಈ ಬಗ್ಗೆ ಮಾತನಾಡಿದ ನಟ ಪ್ರೇಮ್ ಅವರೂ ಬಿಸಿನೆಸ್ ಬಗ್ಗೆ ಯೋಚಿಸಿಯೇ ಮುಂದುವರಿದಿರುತ್ತಾರೆ. ತನಗೆ ಬರುವ ಲಾಭದ ಬಗ್ಗೆ ಅವರಿಗೆ ಯೋಚನೆ ಇದ್ದೇ ಇರುತ್ತದೆ. ಸ್ಟಾರ್ ಸಿನಿಮಾ ಮಾಡಿದರೆ ಆರಂಭದಲ್ಲಾದರೂ ಜನರನ್ನು ಥಿಯೇಟರ್‌ಗೆ ಎಳೆದು ತರುವ ಶಕ್ತಿ ಇರುತ್ತದೆ. ಅದೇ ಬೇರೆಯವರನ್ನು ಹಾಕಿಕೊಂಡು ಸಿನಿಮಾ ಮಾಡಿದಾಗ ಆ ಮಿನಿಮಮ್ ಗ್ಯಾರಂಟಿಯೂ ಇರುವುದಿಲ್ಲ. ಕಥೆ, ಮೇಕಿಂಗ್ ಎಷ್ಟೇ ಚೆನ್ನಾಗಿದ್ದರೂ ಅದು ಜನರಿಗೆ ರುಚಿಸುತ್ತದೋ ಇಲ್ಲವೋ ಅನ್ನುವುದನ್ನು ಅಂದಾಜಿಸುವುದು ಕಷ್ಟ. ಇಂಥಾ ಸ್ಟಾರ್‌ಗಳು ನಮ್ಮಲ್ಲಿ ಒಂದು ಸಿನಿಮಾವನ್ನೂ ಮಾಡದೇ ಅಧಿಕ ಬಂಡವಾಳದ ಕಾರಣಕ್ಕೆ ಬೇರೆ ಭಾಷೆಗೇ ಆದ್ಯತೆ ನೀಡಿದರೆ ನಮ್ಮ ಇಂಡಸ್ಟ್ರಿಗೆ ಅಳಿವು ಉಳಿವಿನ ಪ್ರಶ್ನೆಯಾಗುತ್ತದೆ.

2. ನೆನಪಿರಲಿ ಪ್ರೇಮ್ ಅವರು ಕ್ಯಾರವಾನ್ ಈ ಕಾಲದ ಅನಿವಾರ್ಯತೆ ಅನ್ನುವ ರೀತಿ ಮಾತನಾಡಿದರು. ಆದರೆ ಇವತ್ತು ಚಿತ್ರೀಕರಣ ವಿಳಂಬ ಆಗುವುದಕ್ಕೆ ಕ್ಯಾರವಾನ್ ಕೊಡುಗೆ ಬಹಳ ದೊಡ್ಡದು. ಕ್ಯಾರವಾನ್ ಒಳಗೆ ಸೇರಿಕೊಳ್ಳುವ ಕಲಾವಿದರನ್ನು ಅದರಿಂದ ಆಚೆ ಎಳೆದು ತರುವುದು ಬಹಳ ಕಷ್ಟ. ಅಸಿಸ್ಟೆಂಟ್ ಡೈರೆಕ್ಟರ್ ಕ್ಯಾರವಾನ್ ಬಾಗಿಲು ಕಾಯುತ್ತ ನಿಂತಿರಬೇಕಾಗುತ್ತದೆ. ಆತ ಐದಾರು ಬಾರಿ ಕರೆದ ಬಳಿಕ ನಿಧಾನಕ್ಕೆ ನಟ, ನಟಿಯರು ಸೆಟ್‌ಗೆ ಬರುತ್ತಾರೆ. ಆದರೆ ಸೆಟ್‌ನಲ್ಲಿ ಒಂದೊಂದು ನಿಮಿಷಕ್ಕೂ ನಿರ್ಮಾಪಕ ಹಣ ತೆರಬೇಕಾಗುತ್ತದೆ. ವಿಳಂಬವಾದರೆ ಬಾಡಿಗೆಗೆ ತರುವ ಅನೇಕ ಪರಿಕರಗಳಿಂದ ಹಿಡಿದು ಲೈಟ್ ಬಾಯ್‌ತನಕ ಪ್ರತಿಯೊಬ್ಬರಿಗೂ ಹೆಚ್ಚಿನ ಹಣ ತೆರಬೇಕು. ಈ ನಟ, ನಟಿಯರಿಂದ ಐವತ್ತು ದಿನಗಳ ಶೂಟಿಂಗ್ ಶೆಡ್ಯೂಲ್ ಎಪ್ಪತ್ತು ದಿನಗಳಿಗೆ ವಿಸ್ತರಿಸಿದಾಗ ಖರ್ಚು ಎಷ್ಟು ಹೆಚ್ಚಾಯ್ತು ಊಹಿಸಿ.

3. ನಮ್ಮ ಹೀರೋಗಳು ಇಷ್ಟೆಲ್ಲ ಮಾತನಾಡುತ್ತಾರಲ್ಲ, ಮೂರು ಸಿನಿಮಾ ಮಾಡಿದ ಬಳಿಕ ಅದರ ಸಂಭಾವನೆಯಲ್ಲಿ ಅವರೊಂದು ಸಿನಿಮಾ ನಿರ್ಮಾಣ ಮಾಡುತ್ತ ಹೋಗಲಿ. ಆಗ ಸಿನಿಮಾ ಸಂಖ್ಯೆ ಹೆಚ್ಚುತ್ತದೆ. ಇಂಡಸ್ಟ್ರಿಯ ಮಂದಿಗೆ ಕೆಲಸ ಸಿಗುತ್ತದೆ. ಜೊತೆಗೆ ನಿರ್ಮಾಪಕರ ಕಷ್ಟ ಏನು ಅನ್ನುವುದೂ ತಿಳಿಯುತ್ತದೆ.


ಅನ್ನಕೊಟ್ಟ ಭಾಷೆಗೆ ಅಷ್ಟಾದರೂ ಮರ್ಯಾದೆ ಕೊಡಬೇಕು

4. ಕನ್ನಡದ ನಟ, ನಟಿಯರು ಬೇರೆ ಭಾಷೆಯಲ್ಲಿ ಸಿನಿಮಾ ಮಾಡುವ ಬಗ್ಗೆ ನನಗೆ ತಕರಾರು ಇಲ್ಲ. ಆದರೆ ನಮ್ಮಲ್ಲಿ ವರ್ಷಕ್ಕೆ ಕನಿಷ್ಠ ಒಂದಾದರೂ ಸಿನಿಮಾ ಮಾಡಬೇಕು. ಅವರಿಗೆ ಅನ್ನಕೊಟ್ಟ ಭಾಷೆಗೆ ಅಷ್ಟಾದರೂ ಮರ್ಯಾದೆ ಕೊಡಬೇಕು.

5. ಈಗೀಗ ಸ್ಟಾರ್‌ಗಳು ಕಿರುತೆರೆಗೆ ಹೋಗುವುದು ಸಾಮಾನ್ಯವಾಗಿದೆ. ಅವರ ಸ್ಟಾರ್ ವ್ಯಾಲ್ಯೂ ನೋಡಿ ಕಿರುತೆರೆಯವರು ಅವರನ್ನು ಆಹ್ವಾನಿಸಿರುತ್ತಾರೆ. ಆದರೆ ಸಿನಿಮಾ ಪ್ರೇಕ್ಷಕರ ಮನಸ್ಥಿತಿಯೇ ಬೇರೆ. ಎಷ್ಟೋ ಮಂದಿ ತಮ್ಮ ನೆಚ್ಚಿನ ಸ್ಟಾರ್‌ಗಳನ್ನು ನೋಡಲೆಂದೇ ಥಿಯೇಟರ್‌ಗೆ ಬರುತ್ತಾರೆ. ಅವರಿಗೆ ಈ ಸ್ಟಾರ್‌ಗಳು ಮನೆಯ ಟಿವಿಯಲ್ಲೇ ನೋಡಲು ಸಿಗುತ್ತಾರೆ ಅಂತಾದಾಗ ಅವರು ಸಿನಿಮಾಕ್ಕೆ ಯಾಕೆ ಬರುತ್ತಾರೆ. ಅದಕ್ಕೂ ಹೆಚ್ಚು ದಿನಾ ಅವರ ಮುಖ ನೋಡಿ ಅವರ ಬಗ್ಗೆ ಮೊದಲಿನ ಆಕರ್ಷಣೆ ಕಡಿಮೆ ಆಗುವ ಸಾಧ್ಯತೆಯೂ ಇದೆ.

6. ಡಾ.ರಾಜ್‌ಕುಮಾರ್ ನಿರ್ಮಾಪಕರನ್ನು ಅನ್ನದಾತರು ಎಂದು ಗೌರವಿಸುತ್ತಿದ್ದರು. ಸಿನಿಮಾಕ್ಕೆ ತಮ್ಮೆಲ್ಲ ಶ್ರಮ ಹಾಕಿ ಗೆಲ್ಲಿಸಲು ಶಕ್ತಿಮೀರಿ ಪ್ರಯತ್ನಿಸುತ್ತಿದ್ದರು. ಮನಸ್ಸು ಮಾಡಿದರೆ ಅವರಿಗೆ ಮುಖ್ಯಮಂತ್ರಿಯಾಗುವ ಅವಕಾಶವಿತ್ತು. ಪರಭಾಷೆಗಳಲ್ಲಿ ನಟಿಸಬಹುದಿತ್ತು. ಅವರು ಅದೆಲ್ಲ ತ್ಯಜಿಸಿ ನಟನೆಯನ್ನೇ ಸರ್ವಸ್ವವಾಗಿಸಿಕೊಂಡರು. ಅವರಂತೆ ಇರಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಕಿಂಚಿತ್ತಾದರೂ ಅವರ ಗುಣಗಳನ್ನು ಇಂದಿನ ನಟ, ನಟಿಯರು ಅಳವಡಿಸಿಕೊಳ್ಳಬೇಕಿದೆ.





> ಕಲಾವಿದರಿಗೆ ಇಂಥ ಪಾತ್ರಗಳು ಸಿಗೋದು ಸುಲಭ ಅಲ್ಲ. ನಾನು ಸೀತಾ ಮಾತೆಯ ಪಾತ್ರವನ್ನು ನಾನಾಗಿಯೇ ಆರಿಸಿಕೊಂಡೆ ಎಂದು ನಾನು ಭಾವಿಸುವುದಿಲ್ಲ. ಈ ಪಾತ್ರವನ್ನು ಮಾಡಲು ನನಗೆ ಆಶೀರ್ವಾದ ದಕ್ಕಿದೆ. ಇದು ನಾವು ಹುಡುಕಿಕೊಂಡು ಹೋಗುವ ಅಥವಾ ಹೀಗೆಯೇ ನಟಿಸಬೇಕು ಎಂದು ಮೊದಲೇ ಬರೆದಿಡುವ ಪಾತ್ರವಲ್ಲ ಇದು. ನಾನು ಶೂಟಿಂಗ್ ಸಮಯದಲ್ಲಿ ಧ್ಯಾನದಲ್ಲಿ ಕುಳಿತು, ಸೀತಾ ಮಾತೆ, ನೀನೇ ನನ್ನ ಮೂಲಕ ನಟಿಸು. ನನ್ನಿಂದ ಏನನ್ನು ನಿರೀಕ್ಷಿಸುತ್ತೀಯೋ ಅದು ಈ ಚಿತ್ರಕ್ಕೆ ಸಿಗಲಿ ಎಂದು ಪ್ರಾರ್ಥಿಸುತ್ತಿದ್ದೆ.
>
> **- ಸಾಯಿ** ಪಲ್ಲವಿ

> ರಾಮ ಹಾಗೂ ಸೀತೆ ಪಾತ್ರಗಳಿಗೆ ರಣಬೀರ್ ಕಪೂರ್, ಸಾಯಿ ಪಲ್ಲವಿಯೇ ನನ್ನ ಮೊದಲ ಆಯ್ಕೆ ಆಗಿತ್ತು. ನಾನು ರಣಬೀರ್ ಕಣ್ಣಲ್ಲಿ ರಾಮ, ಸಾಯಿ ಪಲ್ಲವಿ ಕಣ್ಣಲ್ಲಿ ಸೀತೆಯನ್ನು ಕಂಡೆ. ಸಿನಿಮಾ ನೋಡುವಾಗ ರಣಬೀರ್, ಸಾಯಿ ಪಲ್ಲವಿ ಬದಲಿಗೆ ರಾಮ, ಸೀತೆ ಕಾಣುತ್ತಾರೆ.
>
> **- ನಿತೇಶ್ ತಿವಾರಿ,** ನಿರ್ದೇಶಕ

# ಭಾರತೀಯರ ಕನಸನ್ನು ವಿಶ್ವಕ್ಕೆ ಪರಿಚಯಿಸುತ್ತಿದ್ದೇವೆ : ಯಶ್


ಯಶ್, ರಣಬೀರ್ ಕಪೂರ್ ಸಾಯಿಪಲ್ಲವಿ, ಸನ್ನಿ ಡಿಯೋಲ್, ರಾಕುಲ್‌ಪ್ರೀತ್ ಸಿಂಗ್ ಮುಂತಾದವರ ನಟನೆಯ ವಿಶ್ವದ ಬಹು ನಿರೀಕ್ಷಿತ ರಾಮಾಯಣ ಚಿತ್ರದ ಟ್ರೇಲರ್ ಪ್ರದರ್ಶನಗೊಳ್ಳುವ ಮೂಲಕ ಮೊಟ್ಟ ಮೊದಲ ಪ್ಯಾನ್ ಇಂಡಿಯಾ ಕಾರ್ಯಕ್ರಮಕ್ಕೆ ಚಿತ್ರತಂಡ ಸಾಕ್ಷಿ ಆಯಿತು. ದೆಹಲಿಯ ಭಾರತ್ ಮಂಟಪಂನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕ, ತಮಿಳುನಾಡು, ಕೇರಳ, ಮುಂಬೈ, ದೆಹಲಿ, ಆಂಧ್ರ-ತೆಲಂಗಾಣ ರಾಜ್ಯಗಳ ಮಾಧ್ಯಮ ಪ್ರತಿನಿಧಿಗಳು, ಆಯ್ದ ಗಣ್ಯರಿಗೆ ಮಾತ್ರ ರಾಮಾಯಣ ಚಿತ್ರದ 3ಡಿ ಟ್ರೇಲರ್ ಪ್ರದರ್ಶನ ಮಾಡಲಾಯಿತು.

ಜುಲೈ 24ರಂದು ಅಮೆರಿಕಾದಲ್ಲಿ ನಡೆಯಲಿರುವ ಅದ್ದೂರಿ ಕಾರ್ಯಕ್ರಮದಲ್ಲಿ ಇದೇ ಟ್ರೇಲರ್ ಬಿಡುಗಡೆ ಆಗಲಿದ್ದು, ಆ ನಂತರ ಟ್ರೇಲರ್ ಅನ್ನು ಎಲ್ಲರೂ ನೋಡಬಹುದು.

ನಿಮಿಷದ ಟ್ರೇಲರ್‌ನಲ್ಲಿ ರಾವಣನಾಗಿ ಯಶ್ ಅವರ ಆ್ಯಕ್ಷನ್ ಪ್ಯಾಕ್, ರಾಮನ ಪಾತ್ರಧಾರಿ ರಣಬೀರ್ ಕಪೂರ್ ಅವರು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಬಾಣ ಬಿಡುವ ದೃಶ್ಯ, ಅಯೋಧ್ಯೆ ಬಿಟ್ಟು ಹೊರಡುವ ರಾಮ- ಸೀತೆಯ ದೃಶ್ಯ, ಕುಂಭಕರ್ಣನ ಪ್ರವೇಶ, ಯುದ್ಧದ ಸನ್ನಿವೇಶ, ಘರ್ಜಿಸುವ ಸಿಂಹವನ್ನೇ ಘರ್ಜಿಸಿ ಸದ್ದಗಡಿಸುವ ಯಶ್, ವಿಎಫ್‌ಎಕ್ಸ್, ಅತ್ಯಂತ ಸಹಜವಾಗಿ ಕಾಣಿಸಿಕೊಳ್ಳುವ ಸೀತೆಯ ಪಾತ್ರಧಾರಿ ಸಾಯಿಪಲ್ಲವಿ, ಹನುಮನಾಗಿ ಬರುವ ಸನ್ನಿ ಡಿಯೋಲ್ ಪಾತ್ರಗಳ ಜೊತೆಗೆ ತಾಂತ್ರಿಕವಾಗಿ ವಿಎಫ್‌ಎಕ್ಸ್, ಹಿನ್ನೆಲೆ ಸಂಗೀತ ಸೇರಿ ಕೆಲವೇ ನಿಮಿಷಗಳ ರಾಮಾಯಣ ಚಿತ್ರದ ಟ್ರೇಲರ್ ದೃಶ್ಯ ವೈಭವ ಕಟ್ಟಿಕೊಟ್ಟಿದೆ.

ಪ್ರಥಮ್ ಸಂಕಲ್ಪ ಹೆಸರಿನಲ್ಲಿ ನಡೆದ ಈ ಕಾರ್ಯಕ್ರಮದ ಕೊನೆಯಲ್ಲಿ ಸರ್ಪ್ರೈಸ್ ಆಗಿ ಬಂದ ನಟ ಯಶ್ ಅವರು ಎಲ್ಲರಿಗೂ ನಮಸ್ಕಾರ ಎಂದು ಕನ್ನಡದಲ್ಲೇ ಮಾತು ಶುರು ಮಾಡಿ, ತೆರೆ ಮೇಲೆ ನೋಡುತ್ತಿರುವ ಈ ರಿಜಲ್ಟ್‌ನ ಕ್ರೆಡಿಟ್ಟು ನಿರ್ಮಾಪಕ ನಮೀತ್ ಮಲ್ಹೋತ್ರಾ ಅವರಿಗೆ ಸೇರಬೇಕು. ಅವರು ಕರೆದು ನನಗೆ ಪಾತ್ರ ಕೊಟ್ಟರು, ನನಗೆ ಹಿಂದಿ ಕಲಿಯಲು ಅವಕಾಶ ಸಿಕ್ಕಿತು. ರಾಮಾಯಣ ಸಿನಿಮಾ ಆಗಬೇಕೆಂಬುದು ಭಾರತೀಯರ ಕನಸು. ಈ ಕನಸನ್ನು ನಾವು ಗ್ಲೋಬಲ್ ಪ್ಲಾಟ್‌ಫಾರಂನಲ್ಲಿ ಪರಿಚಯಿಸುತ್ತಿದ್ದೇನೆ. ರಣಬೀರ್ ಕಪೂರ್, ಸಾಯಿ ಪಲ್ಲವಿ ಅವರು ಗ್ರೇಟ್, ಅದ್ಭುತ ನಟನೆ. ಅವರು ಪಾತ್ರಗಳಿಗೆ ಶರಣಾಗಿದ್ದಾರೆ ಎಂದರು.

ನಿರ್ಮಾಪಕ ನಮೀತ್ ಮಲ್ಹೋತ್ರಾ ಮಾತನಾಡಿ, ನಾವು ರಾಮಾಯಣವನ್ನು ಸಿನಿಮಾ ಮಾಡಿ, ಇಡೀ ವಿಶ್ವಕ್ಕೆ ತೋರಿಸಲು ಸಂಕಲ್ಪ ಮಾಡಿದೇವು. ಇದು ಮೂರು ವ್ಯಕ್ತಿಗಳಿಂದ ಸಾಧ್ಯವಾಯಿತು. ಆ ಮೂವರಲ್ಲಿ ನನ್ನ ಫ್ರೆಂಡ್ ಯಶ್ ಕೂಡ ಒಬ್ಬರು. ನಟನೆ ಜೊತೆಗೆ ನಿರ್ಮಾಣದಲ್ಲೂ ಪಾಲುದಾರರಾಗುವ ಮೂಲಕ ನಮಗೆ ದೊಡ್ಡ ಶಕ್ತಿಯಾಗಿ ನಿಂತಿದ್ದಾರೆ. ಹಾಲಿವುಡ್‌ಗೆ ಇಂಡಿಯನ್ ಚಿತ್ರರಂಗಕ್ಕೆ ಪ್ರವೇಶಿಸಬೇಕೆಂದು ಯೋಚಿಸಿ ವಿಎಫ್‌ಎಕ್ಸ್ ಸಂಸ್ಥೆ ಶುರು ಮಾಡಿ ಆಸ್ಕರ್ ಪ್ರಶಸ್ತಿ ಪಡೆದುಕೊಂಡೆವು. ಈಗ ಭಾರತೀಯರ ನೆಲದ ಕತೆಯನ್ನು ವಿಶ್ವಮಟ್ಟದಲ್ಲಿ ಹೇಳುತ್ತಿದ್ದೇವೆ. ಮೂವರು ಮಹಾತ್ಮರು ಬರೆದಿರುವ ರಾಮಾಯಣವನ್ನು ಆಧಾರವಾಗಿಟ್ಟುಕೊಂಡು ಈ ಚಿತ್ರ ಮಾಡಲಾಗಿದೆ. ಇಷ್ಟು ದೊಡ್ಡ ಕತೆಯಲ್ಲಿ 5 ಪಾತ್ರಗಳನ್ನು ಮಾತ್ರ ಆಧರಿಸಿ ರಾಮಾಯಣ ಚಿತ್ರ ಮಾಡಲು ಸಾಧ್ಯ. ಈ ಐದೂ ಮಂದಿಯೂ ಹೀರೋಗಳೇ. ಪ್ರತಿ ಭಾರತೀಯನ ಮನಸ್ಸಿನಲ್ಲಿ ರಾಮಾಯಣ ನೆಲೆಯೂರಬೇಕು ಎಂದರು. ಮಹರಾಜ ದಶರಥನ ಪಾತ್ರಧಾರಿ ಅರುಣ್ ಗೋವಿಲ್, ವಿವೇಕ್ ಒಬೆರಾಯ್, ರಾಕುಲ್ ಪ್ರೀತ್ ಸಿಂಗ್, ಬಾಬಾ ರಾಮ್ ದೇವ್ ಗುರೂಜಿ ಸೇರಿದಂತೆ ಹಲವು ಗಣ್ಯರು ಹಾಜರಿದ್ದು, ಚಿತ್ರದ ಬಗ್ಗೆ ಮಾತನಾಡಿದರು.



# ನಂದಿನಿ ಬೆಣ್ಣೆ ತುಪ್ಪದ ದರ ಏರಿಕೆ




ಬೆಂಗಳೂರು: ರಾಜ್ಯದ ಜನತೆಗೆ ಹಾಲಿನ ಉತ್ಪನ್ನಗಳ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಗ್ರಾಹಕರಿಗೆ ಕೆಎಂಎಫ್ ಮತ್ತೊಂದು ಶಾಕ್ ನೀಡಿದ್ದು, ಬೆಣ್ಣೆ ಮತ್ತು ತುಪ್ಪದ ದರವನ್ನು ಗಣನೀಯವಾಗಿ ಹೆಚ್ಚಳ ಮಾಡಿದೆ.

ಪರಿಷ್ಕೃತ ದರದ ಅನ್ವಯ, ಪ್ರತಿ ಕೆಜಿ ತುಪ್ಪದ ಬೆಲೆಯಲ್ಲಿ 15 ರೂಪಾಯಿ ಹಾಗೂ ಪ್ರತಿ ಕೆಜಿ ಬೆಣ್ಣೆ ದರದಲ್ಲಿ 22 ರೂ. ಹೆಚ್ಚಳ ಮಾಡಲಾಗಿದೆ. ಈ ನೂತನ ದರಗಳು ಜುಲೈ 24 ರಿಂದ ಅಧಿಕೃತವಾಗಿ ಜಾರಿಗೆ ಬರಲಿವೆ. ರಾಜ್ಯಾದ್ಯಂತ ಇರುವ ಎಲ್ಲಾ ಕೆಎಂಎಫ್ ಮಳಿಗೆಗಳಲ್ಲಿ ಈ ಹೊಸ ದರಗಳು ಅನ್ವಯವಾಗಲಿವೆ ಎಂದು ತಿಳಿದು ಬಂದಿದೆ.

ಈ ಹಠಾತ್ ನಿರ್ಧಾರದಿಂದಾಗಿ ಸಾಮಾನ್ಯ ಜನರ ಮಾಸಿಕ ಬಜೆಟ್ ಮೇಲೆ ಹೆಚ್ಚಿನ ಹೊರೆ ಬೀಳಲಿದ್ದು, ಎಲ್ಲೆಡೆ ಆಕ್ರೋಶ ವ್ಯಕ್ತವಾಗುತ್ತಿದೆ.

# ಎಸ್‌ಐಆರ್: 31 ಮತಗಟ್ಟೆಗಳಲ್ಲಿ ಗಣಕೀಕರಣ ಶೇ.100 ಸಾಧನೆ

## ಪಿಎಲ್‌ಒ ಗಳಿಗೆ ಎನ್ಯುಮರೇಷನ್ ನಮೂನೆ ವಾಪಾಸ್ ನೀಡದಿದ್ದರೆ ಮತ ಹಕ್ಕಿಗೆ ಧಕ್ಕೆ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನಲ್ಲಿ ಈವರೆಗೆ ಶೇ.100 ರಷ್ಟು ಎನ್ಯುಮರೇಷನ್ ಫಾರಂಗಳನ್ನು ವಿತರಣೆ ಮಾಡಲಾಗಿದ್ದು, 31 ಮತಗಟ್ಟೆಗಳಲ್ಲಿ ಗಣಕೀಕರಣ ಶೇ. 100 ರಷ್ಟು ಸಾಧನೆ ಮಾಡಲಾಗಿದೆ. ಮತದಾರರು ತಮಗೆ ನೀಡಿರುವ ಎನ್ಯುಮರೇಷನ್ ನಮೂನೆಗಳನ್ನು ಪಿಎಲ್‌ಒ ಗಳಿಗೆ ಕೂಡಲೇ ವಾಪಸ್ ನೀಡದಿದ್ದರೆ ಮತದಾರರ ಪಟ್ಟಿಯಿಂದ ಹೊರಗುಳಿಯುತ್ತೀರಿ ಎಂದು ತಹಸೀಲ್ದಾರ್ ಎಚ್.ಮಲ್ಲಿಕಾರ್ಜುನ ಅವರು ಮತದಾರರಿಗೆ ಎಚ್ಚರಿಸಿದ್ದಾರೆ.


ಪಟ್ಟಣದ ಮಿನಿ ವಿದಾನಸೌಧ ಸಭಾಂಗಣದಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿದಿಗಳಿಗೆ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಮಾಹಿತಿ ನೀಡುವ ಸಭೆಯಲ್ಲಿ ಮಾತನಾಡಿ, ಮತಗಟ್ಟೆ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡಿದ್ದಾರೆ. ಮತಗಟ್ಟೆ ಏಜೆಂಟರು ಸಹ ಸಹಕಾರ ನೀಡಿ ಅರ್ಹ ಮತದಾರರ ಹೆಸರು ಪಟ್ಟಿ ಯಿಂದ ಕೈಬಿಟ್ಟು ಹೋಗದಂತೆ ಸಹ ಕರಿಸಬೇಕು ಎಂದು ತಿಳಿಸಿದರು.

ತಾಲ್ಲೂಕಿನಲ್ಲಿ 95 ಮತಗಟ್ಟೆಗಳಿವೆ. ಎಲ್ಲ ಮತಗಟ್ಟೆಗಳಲ್ಲಿ ಬರುವ ಎಲ್ಲ ಮತದಾರರಿಗೆ ಎನ್ಯುಮರೇಷನ್ ಫಾರಂ ನೀಡಲಾಗಿದೆ. 31 ಮತಗಟ್ಟೆಗಳಲ್ಲಿ ಶೇ. 100 ರಷ್ಟು ಗುರಿ ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು. ಮರಣ, ಸ್ಥಳಾಂತರ ಇನ್ನಿತರೆ ಕಾರಣಗಳಿಂದ ಮತದಾರರನ್ನು ಹುಡುಕುವುದು ಕಷ್ಟವಾಗಿದೆ. ಸ್ಥಳೀಯರಾದ ನಿಮಗೆ ವಿವರ ಗೊತ್ತಿರುವುದರಿಂದ ಸಹಕಾರ ನೀಡಬೇಕು. ಶೇ. 75 ಕ್ಕಿಂತ ಕಡಿಮೆ ಸಾಧನೆ ಮಾಡಿರುವ ಮತಗಟ್ಟೆಗಳ ವ್ಯಾಪ್ತಿಯಲ್ಲಿ ಹೆಚ್ಚು ಗಮನ ಹರಿಸಲಾಗುವುದು.

ಮತಗಟ್ಟೆ ಅಧಿಕಾರಿಗಳು ಮತಗಟ್ಟೆಯ ವ್ಯಾಪ್ತಿಯಲ್ಲಿ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯ ಮಾಹಿತಿ ನೀಡಲು ರಾಜಕೀಯ ಪಕ್ಷಗಳಿಂದ ಆಯಾ ಮತಗಟ್ಟೆ ವ್ಯಾಪ್ತಿಗೆ ನೇಮಕ ಮಾಡಲಾದ ಎಲ್ಲ ಮತಗಟ್ಟೆ ಏಜೆಂಟರುಗಳನ್ನು ಒಳಗೊಂಡಂತ ಸಭೆ ನಡೆಸಿ, ಮೀಟಿಂಗ್ ಆಫ್ ಮಿನಿಟ್ಸ್ ಸಿದ್ಧಪಡಿಸಿ ತತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಈ ಮಾಹಿತಿಯನ್ನು ಈಗಾಗಲೆ ನೇಮಕ ಮಾಡಲಾದ ಎಲ್ಲ ಮತಗಟ್ಟೆ ಏಜೆಂಟರ ಗಮನಕ್ಕೆ ತರುವಂತೆ ರಾಜಕೀಯ ಪಕ್ಷಗಳ ಪ್ರತಿನಿದಿಗಳಿಗೆ ತಿಳಿಸಬೇಕು. ತಾಲ್ಲೂಕಿನಲ್ಲಿ ಯಾವುದೆ ನ್ಯೂನತೆಗಳಿಗೆ ಅವಕಾಶ ಇಲ್ಲದಂತೆ ವಿಶೇಷ ಸಮಗ್ರ ಮರಿಷ್ಕರಣೆ ಕಾರ್ಯ ನಡೆಸಲಾಗುತ್ತಿದೆ. ಇದಕ್ಕೆ ಎಲ್ಲರ ಸಹಕಾರ ಅಗತ್ಯ ಎಂದರು.

ತಾಲ್ಲೂಕಿನಲ್ಲಿ ಒಟ್ಟು 71870 ಮತದಾರರಿದ್ದಾರೆ. ಗಣತಿ ನಮೂನೆ ಸ್ವೀಕರಿಸಿ 60323 ಮತದಾರರನ್ನು ಬಿ.ಎಲ್.ಒ. ಆಪ್ ಮೂಲಕ ಗಣಕೀಕರಣ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಚುನಾವಣಾ ಶಾಖೆ ಶಿರಸ್ತೆದಾರ್ ಜೆ. ಮಂಜುಳ, ಸಿಬ್ಬಂದಿಗಳಾದ ಶಿವಾನಂದ, ಎಚ್.ಎಂ. ಮಧುಕುಮಾರ್, ಸರಸ್ವತಿ ಕಾಂಗ್ರೆಸ್ ಪಕ್ಷ ಪ್ರತಿನಿದಿಗಳಾದ ರಾಜಶೇಖರ್, ಜೆಡಿಎಸ್ ಕುಮಾರಸ್ವಾಮಿ, ಬಿಜೆಪಿ ಹೇಮಚಂದ್ರ ಮತ್ತು ಬಿಎಸ್‌ಪಿ ಮಂಜುನಾಥ್ ಉಪಸ್ಥಿತರಿದ್ದರು.



# ನೀಟ್: ಫಾಸ್ಟ್ ಟ್ರ್ಯಾಕ್ ನ್ಯಾಯಾಲಯಗಳ ಸ್ಥಾಪನೆ

## ಪ್ರಧಾನಿ ಮೋದಿ ಪ್ರಮುಖ ಘೋಷಣೆ

• ಪ್ರಜೋದಯ ವರದಿ

**ನವದೆಹಲಿ:** ದೇಶಾದ್ಯಂತ ಕಾವೇರಿರುವ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಯುವಜನರ ಭಾರಿ ಪ್ರತಿಭಟನೆಗಳ ನಡುವೆ ಪ್ರಧಾನಿ ನರೇಂದ್ರ ಮೋದಿ ಅವರು ಕೊನೆಗೂ ತಮ್ಮ ಮೌನ ಮುರಿದಿದ್ದು, ಪರೀಕ್ಷಾ ಅಕ್ರಮ ಎಸಗಿದ ಅಪರಾಧಿಗಳಿಗೆ ತಕ್ಷಣವೇ ಕಠಿಣ ಶಿಕ್ಷೆ ಖಚಿತಪಡಿಸಲು ಫಾಸ್ಟ್ ಟ್ರ್ಯಾಕ್ ನ್ಯಾಯಾಲಯಗಳನ್ನು ಸ್ಥಾಪಿಸುವುದಾಗಿ ಪ್ರಧಾನಿ ಮೋದಿ ಪ್ರಮುಖ ಘೋಷಣೆ ಮಾಡಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಂಚಿಕೊಂಡಿರುವ ಪ್ರಧಾನಿ, ದೇಶದ ಯುವಜನತೆಯ ಭವಿಷ್ಯ ಮತ್ತು ಕಲ್ಯಾಣಕ್ಕಿಂತ ಸರ್ಕಾರಕ್ಕೆ ಬೇರೆ ಯಾವುದೂ ಮುಖ್ಯವಲ್ಲ ಎಂದು ಪ್ರತಿಪಾದಿಸಿದ್ದು, ನಮ್ಮ ಯುವಕರ ಕಲ್ಯಾಣ ಮತ್ತು ಭವಿಷ್ಯಕ್ಕಿಂತ ನಮಗೆ ಬೇರೇನೂ ಮುಖ್ಯವಲ್ಲ ಎಂದು ಹೇಳಿಕೊಂಡಿದ್ದಾರೆ.

ಪ್ರಶ್ನೆಪತ್ರಿಕೆ ಸೋರಿಕೆ ದಂಧೆಯಲ್ಲಿ ಭಾಗಿಯಾಗಿರುವ ಪ್ರತಿಯೊಬ್ಬರಿಗೂ ತ್ವರಿತ ಹಾಗೂ ಕಠಿಣ ಶಿಕ್ಷೆಯಾಗುವುದನ್ನು ಖಚಿತಪಡಿಸಲು ನಾವು ಫಾಸ್ಟ್ ಟ್ರ್ಯಾಕ್ ಕೋರ್ಟ್‌ಗಳನ್ನು ಸ್ಥಾಪಿಸಲು ನಿರ್ಧರಿಸಿದ್ದೇವೆ. ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ. ಯುವಕರ ಭವಿಷ್ಯದ ಜೊತೆ ಚೆಲ್ಲಾಟ ವಾಡುವ ಯಾರನ್ನೂ ಸರ್ಕಾರ ಬಿಡುವುದಿಲ್ಲ ಎಂದಿದ್ದಾರೆ.

ಪ್ರಧಾನಿ ನೀಡಿದ ಮುಖ್ಯ ಭರವಸೆಗಳು **ತ್ವರಿತ ವಿಚಾರಣೆ:** ನೀಟ್ ಸೇರಿದಂತೆ ಎಲ್ಲಾ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳನ್ನು ಸಾಮಾನ್ಯ ನ್ಯಾಯಾಲಯಗಳಲ್ಲಿ ವಿಳಂಬ ಮಾಡದೇ, ಫಾಸ್ಟ್ ಟ್ರ್ಯಾಕ್ ಕೋರ್ಟ್‌ಗಳ ಮೂಲಕವೇ ಶೀಘ್ರವಾಗಿ ವಿಚಾರಣೆ ನಡೆಸಿ ಅಪರಾಧಿಗಳಿಗೆ ಜೈಲು ಶಿಕ್ಷೆ ವಿಧಿಸಲಾಗುವುದು.

**ವಿದ್ಯಾರ್ಥಿಗಳ ಹಿತರಕ್ಷಣೆ:** ಪರೀಕ್ಷಾ ಪಾರದರ್ಶಕತೆ ಮತ್ತು ವಿದ್ಯಾರ್ಥಿಗಳ ಭವಿಷ್ಯವನ್ನು ಕಾಪಾಡಲು ಸರ್ಕಾರ ನಿರಂತರವಾಗಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದು, ಇದು ಆ ಸರಣಿ ಸುಧಾರಣೆಗಳ ಪ್ರಮುಖ ಹೆಜ್ಜೆಯಾಗಿದೆ ಎಂದು ತಿಳಿಸಿದ್ದಾರೆ.



ದೆಹಲಿಯ ಜಂತರ್ ಮಂತರ್‌ನಲ್ಲಿ ಕಾಕ್ರೋಚ್ ಜನತಾ ಪಾರ್ಟಿ ಸೇರಿದಂತೆ ಲಕ್ಷಾಂತರ ವಿದ್ಯಾರ್ಥಿಗಳು ಹಾಗೂ ಪ್ರಸಿದ್ಧ ಕಾರ್ಯಕರ್ತ ಸೋನಮ್ ವಾಂಗ್‌ಚುಕ್ ಕಳೆದ ಒಂದು ತಿಂಗಳಿನಿಂದ ನಿರಂತರ ಉಪವಾಸ ಸತ್ಯಾಗ್ರಹ ಮತ್ತು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ವಿವಾದಕ್ಕೆ ಸಂಬಂಧಿಸಿದಂತೆ ಪ್ರತಿಪಕ್ಷಗಳ ನಾಯಕ ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ನಾಯಕರು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ಪ್ರಧಾನಿ ನಿವಾಸದ ಹೊರಗೆ ಧರಣಿ ನಡೆಸಿದ್ದರು. ಶಿಕ್ಷಣ ಸಚಿವರು ವಿಪಕ್ಷಗಳು ವಿದ್ಯಾರ್ಥಿಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿವೆ ಎಂದು ಆರೋಪಿಸಿದ್ದರು.

ಪ್ರತಿಭಟನಾಕಾರರ ಮೇಲಿನ ಪೋಲಿಸ್ ಕ್ರಮದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್ ತಳ್ಳಿ ಹಾಕಿದ್ದವು. ಈ ಬೆನ್ನಲ್ಲೇ, ವಿದ್ಯಾರ್ಥಿಗಳ ಆಕ್ರೋಶ ತಣ್ಣಗಾಗಿಸಲು ಮತ್ತು ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ವಿಷಯವನ್ನು ಹತೋಟಿಗೆ ತರಲು ಪ್ರಧಾನಿ ಮೋದಿ ಈ ಫಾಸ್ಟ್ ಟ್ರ್ಯಾಕ್ ಕೋರ್ಟ್ ಅಸ್ತ್ರವನ್ನು ಬಳಸಿದ್ದಾರೆ.

# ಪುರುಷರ ಸಾಧನೆ ಹಿಂದೆ ಮಹಿಳೆ ಆದರ್ಶ ಮುಖ್ಯ

## ಆಲೂರಿನಲ್ಲಿ ದಿವಂಗತ ಚನ್ನಮ್ಮರವರಿಗೆ ಸಂತಾಪ ಸೂಚಕ ಸಭೆ

• ಪ್ರಜೋದಯ ವರದಿ

**ಆಲೂರು:** ಒಂದು ಕುಟುಂಬದಲ್ಲಿ ಮಹಿಳೆ ಸಹಿಷ್ಣುತೆಯಿಂದ ತನ್ನ ಪತಿಗೆ ಸಹಕಾರವನ್ನು ನೀಡಿದರೆ ಹೊರ ಜಗತ್ತಿನಲ್ಲಿ ಯಾವ ರೀತಿಯಾದ ಸಾಧನೆಯನ್ನಾದರೂ ಕೂಡ ಮಾಡಬಹುದು ಎಂಬುದಕ್ಕೆ ಚನ್ನಮ್ಮನವರು ಆದರ್ಶ ಹಾಗೂ ಸಾಕ್ಷಿಯಾಗಿದ್ದಾರೆ ಎಂದು ಮಾಜಿ ಶಾಸಕ ಹೆಚ್.ಕೆ. ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ಮಾಜಿ ಪ್ರಧಾನಿ ದೇವೇಗೌಡ ಅವರ ಪತ್ನಿ ಚನ್ನಮ್ಮನವರ ನಿಧನದ ಹಿನ್ನೆಲೆಯಲ್ಲಿ ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಏರ್ಪಡಿಸಲಾಗಿದ್ದ ಸಂತಾಪ ಸೂಚಕ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಪ್ರಧಾನಿಯ ಧರ್ಮಪತ್ನಿಯಾಗಿದ್ದರೂ ಅಧಿಕಾರಕ್ಕೆ ಆಸೆ ಪಡದೆ ದೇವೇಗೌಡರ ರಾಜಕೀಯ ಜೀವನದ ಏಳು-ಬೀಳುಗಳಲ್ಲಿ ಅವರ ಬೆನ್ನಿಗೆ ನಿಂತು ರಾಜಕೀಯವಾಗಿಯಲ್ಲದೆ ಯಾವ ವಿಚಾರದಲ್ಲಿಯೂ ಕೂಡ ಮೂಗು ತೂರಿಸದೆ ಕುಟುಂಬದ ಒಳಿತಿಗಾಗಿ ತಮ್ಮ ಜೀವನವನ್ನೆ ಮುಡಿಪಾಗಿಟ್ಟ ಮಹಾನ್ ತ್ಯಾಗಮಯಿ ಎಂದು ಸ್ಮರಿಸಿದರು.

ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಕೆ.ಎಸ್.ಮಂಜೇಗೌಡ ಅವರು ಮಾತನಾಡಿ, ಚನ್ನಮ್ಮನವರು ಮಹಾ ದೈವ ಭಕ್ತರಾಗಿದ್ದು, ಅವರ ಜೀವಿತ ಅವಧಿಯಲ್ಲಿ ಒಂದು ದಿನವೂ ಕೂಡ ಯಾವುದೇ ರಾಜಕೀಯ ವಿಷಯಗಳಲ್ಲಿ ಮೂಗು ತೂರಿಸದೆ, ಕುಟುಂಬ ಮತ್ತು ಮಕ್ಕಳ ಏಳಿಗೆಗೆ ಶ್ರಮಿಸುತ್ತ ಇತರ ರಾಜಕಾರಣಿಗಳ ಪತ್ನಿಯರಿಗೆ ಆದರ್ಶರಾಗಿದ್ದರು ಎಂದರು.

ಜಿಲ್ಲಾ ಹಿಂದುಳಿದ ವರ್ಗಗಳ ಮುಖಂಡ ಬಿ.ಸಿ ಶಂಕರಾಚಾರ್, ಬಿಜೆಪಿ ಜಿಲ್ಲಾ ಮಾಜಿ ಉಪಾಧ್ಯಕ್ಷ ಕದಾಳು ಲೋಕೇಶ್, ಹಾಸನ ಜಿಲ್ಲಾ ಸಹಕಾರ ಯೂನಿಯನ್ ಉಪಾಧ್ಯಕ್ಷ ರಾಜಪ್ಪಗೌಡ, ತಾಲ್ಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷ ಕೆ.ಎನ್ ಕಾಂತರಾಜು, ಮಾಜಿ ಸದಸ್ಯ ನಟರಾಜು ನಾಕಲಗೂಡು, ಬಿಜೆಪಿ ಹೇಮಂತ್ ಕುಮಾರ್, ಹಾಸನ ಹಾಲು ಒಕ್ಕೂಟ ನಿರ್ದೇಶಕ ಪಿ.ಎಲ್.ಲಿಂಗರಾಜು, ಕರವೇ ಜಿಲ್ಲಾ ಕಾರ್ಯದರ್ಶಿ ರಘು ಪಾಳ್ಯ, ಅಜ್ಜೇಗೌಡ, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎಸ್.ಎನ್ ಪ್ರಕಾಶ್, ನಿರ್ದೇಶಕ ಪ್ರವೀಣ್ ರಾಜಪ್ಪ, ತಾ.ಪಂ ಮಾಜಿ ಸದಸ್ಯರಾದ ಸಿ.ವಿ ಲಿಂಗರಾಜು, ಕೆ.ಎನ್. ಕಾಂತರಾಜು, ನಟರಾಜು ನಾಕಲಗೂಡು, ಸಹಕಾರ ಸಂಘದ ಅಧ್ಯಕ್ಷ ಹೋತನಹಳ್ಳಿಪುರ ಮಂಜೇಗೌಡ, ಕೆ.ಎಸ್. ಆರ್.ಟಿ.ಸಿ ರಾಜೇಗೌಡ, ಬೈರಾಪುರ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ದೊರೆಸ್ವಾಮಿ ಇತರರಿದ್ದರು.



# ಹೇಮಾವತಿ ಮುಳುಗಡೆ ಭೂ ಹಂಚಿಕೆ ಅಕ್ರಮ: ತನಿಖೆಗೆ ಆಗ್ರಹ

## ಕರ್ನಾಟಕ ರಾಷ್ಟ್ರ ಸಮಿತಿಯಿಂದ ಪ್ರತಿಭಟನೆ

• ಪ್ರಜೋದಯ ವರದಿ

**ಸಕಲೇಶಪುರ:** ಹೇಮಾವತಿ ಜಲಾಶಯ ಮುಳುಗಡೆ ಸಂತ್ರಸ್ತರಿಗೆ ಭೂಮಿ ಹಂಚಿಕೆ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವ ಆರೋಪದ ಹಿನ್ನೆಲೆಯಲ್ಲಿ ನೈಜ ಭೂ ಸಂತ್ರಸ್ತರಿಗೆ ನ್ಯಾಯಯುತವಾಗಿ ಭೂಮಿ ಮಂಜೂರು ಮಾಡುವುದರ ಜೊತೆಗೆ, ತಪ್ಪಿತಸ್ಥ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್ ಎಸ್) ಪಕ್ಷದ ಮುಖಂಡರು ಒತ್ತಾಯಿಸಿದರು.

ಗುರುವಾರ ಕೆಆರ್‌ಎಸ್ ಪಕ್ಷದ ಮುಖಂಡರು ಸಕಲೇಶಪುರ ಉಪ ವಿಭಾಗಾಧಿಕಾರಿ ಕಚೇರಿ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ, ಭೂ ಹಂಚಿಕೆ ಪ್ರಕ್ರಿಯೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಸ್ವತಂತ್ರ ತನಿಖೆ ನಡೆಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಮನವಿಯಲ್ಲಿ ಹೇಮಾವತಿ ಮುಳುಗಡೆ ಸಂತ್ರಸ್ತರ ಅಧಿಕೃತ ಪಟ್ಟಿಯನ್ನು ಸಾರ್ವಜನಿಕರ ಮುಂದಿಡಬೇಕು. ತನಿಖೆ ಪೂರ್ಣಗೊಳ್ಳುವವರೆಗೆ ಸಂಬಂಧಿತ ದಾಖಲೆಗಳಲ್ಲಿ ಯಾವುದೇ ತಿದ್ದುಪಡಿ ಅಥವಾ ನಾಶವಾಗದಂತೆ ಸೂಕ್ತ ಭದ್ರತಾ ಕ್ರಮ ಕೈಗೊಳ್ಳಬೇಕು. ಅರ್ಹ ಸಂತ್ರಸ್ತರಿಗೆ ಅವರ ಹಕ್ಕಿನ ಭೂಮಿಯನ್ನು ನ್ಯಾಯಯುತವಾಗಿ ಮಂಜೂರು ಮಾಡಬೇಕು. ತನಿಖೆಯ ಪ್ರಗತಿ ಹಾಗೂ ಅಂತಿಮ ವರದಿಯನ್ನು ಸಾರ್ವಜನಿಕರ ಮುಂದಿಡಬೇಕು ಎಂದು ಒತ್ತಾಯಿಸಿದರು.

ಹಲವು ವರ್ಷಗಳಿಂದ ನ್ಯಾಯಕ್ಕಾಗಿ ಕಾಯು ತ್ತಿರುವ ನೈಜ ಸಂತ್ರಸ್ತರ ಹಿತದೃಷ್ಟಿ ಯಿಂದ ಈ ಪ್ರಕರಣವನ್ನು ವಿಶೇಷ ಪ್ರಕರಣವಾಗಿ ಪರಿಗಣಿಸಿ ಶೀಘ್ರ ಸಮಗ್ರ ತನಿಖೆ ಕೈಗೊಳ್ಳಬೇಕೆಂದು ಪದಾಧಿಕಾರಿಗಳು ಆಗ್ರಹಿಸಿದರು.

ಪಕ್ಷದ ಜಿಲ್ಲಾಧ್ಯಕ್ಷ ದೇವರಾಜ್, ಜಿಲ್ಲಾ ಕಾರ್ಯಾಧ್ಯಕ್ಷ ಹಾಗೂ ಸಕಲೇಶಪುರ ತಾಲೂಕು ಉಸ್ತುವಾರಿ ಸಚಿನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಧು, ಜಿಲ್ಲಾ ಕಾರ್ಯದರ್ಶಿ ಪ್ರಕಾಶ್ ಡಿ.ಎಚ್., ಸಂಘಟನಾ ಕಾರ್ಯದರ್ಶಿ ಲಕ್ಷ್ಮಿಗೌಡ, ಇಬ್ರಾಹಿಂ, ತಾಲ್ಲೂಕು ಅಧ್ಯಕ್ಷ ಯೂನಸ್, ಮುಖಂಡ ತಮ್ಮೇಗೌಡ ಹರಳಹಳ್ಳಿ ಸೇರಿದಂತೆ ಪಕ್ಷದ ಪದಾಧಿಕಾರಿಗಳು ಹಾಗೂ ಇನ್ನಿತರರು ಉಪಸ್ಥಿತರಿದ್ದರು.




**AFFIDAVIT**

**I RAMAKRISHNA BHATTA S/o M MANJUNATH BHATTA** aged about 68 years, Residing at # 1584/1, Seetharamanjaneya Temple Road, Northern Extension Hassan City, Hassan District -573201, Karnataka State. I state that in my **Adhar Card (**** **** 0557)** my Name is mentioned as **RAMAKRISHNA BHATTA**. I state that in my Kotak Mahindra Bank Account my Name is mentioned **RAMAKRISHNA BHAT**. I state that my name is **RAMAKRISHNA BHATTA & RAMAKRISHNA BHAT** is one and the same and relates to my name only. vide affidavit dated 23-07-2026 sworn before Notary public D.S Jagadamba at Hassan.


# ಎಸ್‌ಐಆರ್: ಆ.8 ರ ವರೆಗೆ ವಿಸ್ತರಣೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಕ್ಷೇತ್ರವಾರು ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಪ್ರಗತಿಯಲ್ಲಿದ್ದು, ಆ.8 ರ ವರೆಗೂ ವಿಸ್ತರಿಸಲಾಗಿದೆ ಎಂದು ಮತದಾರರ ನೊಂದವಣಾಧಿಕಾರಿ ಮಂಜುನಾಥ್ ತಿಳಿಸಿದರು.

ತಾಲ್ಲೂಕು ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಸ್ತುತ ಶೇ 84 ರಷ್ಟು ಎಸ್‌ಐಆರ್ ಪ್ರಗತಿ ಸಾಧಿಸಲಾಗಿದೆ. ಪ್ರತಿ ಮನೆಗೆ ಬಿಎಲ್‌ಒಗಳು ತೆರಳಿ ಅರ್ಜಿ ನಮೂನೆ ತುಂಬಿ ಪಡೆಯುತ್ತಿದ್ದಾರೆ. ಹೊಳೆನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 2 ಲಕ್ಷದ 24 ಸಾವಿರದ 676 ಮತದಾರರು ಇರುತ್ತಾರೆ. ಪರಿಷ್ಕರಣೆಯ ಪ್ರಸ್ತುತ ಹಂತದಲ್ಲಿ 1.86,302 ರಷ್ಟು ನೊಂದಾಯಿತರನ್ನು ಗಣಕೀಕರಣಗೊಳಿಸಲಾಗಿದೆ ಎಂದರು.



ಮರಣ ಹೊಂದಿದ 5810 ಹಾಗೂ ಶಾಶ್ವತ ವಲಸೆ ಹೋದ 5307 ಮತದಾರರಿದ್ದ ಹೆಸರುಗಳು ಕಂಡು ಬಂದಿದೆ. ಸಾವಿರ ಮತದಾರರು ಪುನರಾವರ್ತಿತ ಮತದಾರರು ಇದ್ದು, ಉಳಿದ ಶೇ. 16 ರಷ್ಟು ಪರಿಷ್ಕೃತಗೊಳಿಸಿ ನೊಂದಾಯಿಸುವ ಕಾರ್ಯ ಬಾಕಿ ಇದೆ. ನಮ್ಮ ಉದ್ದೇಶ ಶೇ 100 ರಷ್ಟು ಪೂರ್ಣಗೊಳಿಸಬೇಕೆಂದಿಲ್ಲ, ಜತೆಗೆ ಲೋಪವಿಲ್ಲದೆ ಸಹ ಪರಿಷ್ಕರಣೆಗೊಳಿಸಬೇಕಿದೆ. ಸಾರ್ವಜನಿಕರು ಮತ್ತು ವಿವಿಧ ರಾಜಕೀಯ ಪಕ್ಷದವರು ಸಹಕರಿಸುವಂತೆ ಕೋರಿದರು.

# ಮನೆ ಬೀಗ ಮುರಿದು ಚಿನ್ನಾಭರಣ, ನಗದು ಕಳವು

**ಹೊಳೆನರಸೀಪುರ:** ತಾಲ್ಲೂಕಿನ ಕಾಮಸಮುದ್ರ ಗ್ರಾಮದ ಮನೆಯೊಂದರ ಬೀಗ ಮುರಿದ ಕಳ್ಳರು ಬೀರುವಿನಲ್ಲಿದ್ದ 70 ಗ್ರಾಂ ಚಿನ್ನದ ಆಭರಣ ಮತ್ತು 1 ಕಿ.ಲೋ. ಬೆಳ್ಳಿಯ ಪದಾರ್ಥ ಸೇರಿದಂತೆ 15 ಸಾವಿರ ರೂ. ಹಣ ಕದ್ದೊಯ್ದಿದ್ದಾರೆ.

ಗ್ರಾಮದ ರಮೇಶ್ ಎಂಬುವರ ಮನೆಯವರು ಜು.18 ರ ಶನಿವಾರ ಹಾಸನದ ಮಗಳ ಮನೆಗೆ ಮನೆಯವರು ತೆರಳಿದ್ದರು. ಭಾನುವಾರ ಹಿಂದಿರುಗಿದ ವೇಳೆ ಮನೆಯ ಬೀಗ ಮುರಿದು ಬಾಗಿಲು ತೆರೆದಿತ್ತು. ಇದರಿಂದ ಕಳವು ನಡೆದಿದೆ ಎಂದು ಖಾತ್ರಿಯಾದ ಹಿನ್ನಲೆಯಲ್ಲಿ ಪೊಲೀಸರಿಗೆ ದೂರು ನೀಡಿದ್ದಾರೆ.

# ಲಯನ್ಸ್ ಸಂಸ್ಥೆ ಸಮಾಜಕ್ಕೆ ಮಾದರಿ: ಸಂಜೀತ್ ಶೆಟ್ಟಿ

• ಪ್ರಜೋದಯ ವರದಿ

**ಸಕಲೇಶಪುರ:** ಯಾವುದೇ ರೀತಿಯ ಪ್ರತಿಫಲದ ನಿರೀಕ್ಷೆಯಿಲ್ಲದೆ ಸಮಾಜ ಸೇವೆಯನ್ನು ಜೀವನದ ಧ್ಯೇಯವನ್ನಾಗಿಸಿಕೊಂಡಿರುವ ಲಯನ್ಸ್ ಸಂಸ್ಥೆ ವಿಶ್ವದಾದ್ಯಂತ ಮಾದರಿ ಸೇವಾ ಸಂಸ್ಥೆಯಾಗಿ ಗುರುತಿಸಿಕೊಂಡಿದೆ ಎಂದು ಲಯನ್ಸ್ ಸಂಸ್ಥೆಯ ಮಾಜಿ ಗವರ್ನರ್ ಸಂಜೀತ್ ಶೆಟ್ಟಿ ಹೇಳಿದರು.

ಪಟ್ಟಣದ ಶೀನಪ್ಪಶೆಟ್ಟಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ 2026-27ನೇ ಸಾಲಿನ ಲಯನ್ಸ್ ಕ್ಲಬ್‌ನ ನೂತನ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಅವರು ಮಾತನಾಡಿ, ಲಯನ್ಸ್ ಸಂಸ್ಥೆ ಕಳೆದ ಹಲವು ದಶಕಗಳಿಂದ ಆರೋಗ್ಯ, ಶಿಕ್ಷಣ, ಪರಿಸರ ಸಂರಕ್ಷಣೆ, ಸಾಮಾಜಿಕ ಕಳಕಳಿ ಹಾಗೂ ಮಾನವೀಯ ಸೇವೆಗಳ ಮೂಲಕ ಜನರ ವಿಶ್ವಾಸವನ್ನು ಗಳಿಸಿದೆ. ಕಣ್ಣಿನ ತಪಾಸಣಾ ಶಿಬಿರಗಳು, ರಕ್ತದಾನ ಶಿಬಿರಗಳು, ವಿದ್ಯಾರ್ಥಿಗಳಿಗೆ ನೆರವು, ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ಪರಿಹಾರ ಕಾರ್ಯಗಳು ಸೇರಿದಂತೆ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ ಎಂದು ಹೇಳಿದರು.




ಸಕಲೇಶಪುರ ಲಯನ್ಸ್ ಕ್ಲಬ್ ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿಯೂ ಉತ್ತಮ ಸೇವಾ ಚಟುವಟಿಕೆಗಳಿಂದ ಗುರುತಿಸಿಕೊಂಡಿದ್ದು, ಈ ಸಾಧನೆಯ ಹಿಂದೆ ಎಲ್ಲಾ ಸದಸ್ಯರ ನಿಸ್ವಾರ್ಥ ಸೇವಾ ಮನೋಭಾವವೇ ಕಾರಣವಾಗಿದೆ. ನೂತನ ಪದಾಧಿಕಾರಿಗಳು ಇದೇ ಉತ್ಸಾಹ ಹಾಗೂ ಬದ್ಧತೆಯಿಂದ ಸಮಾಜಮುಖಿ ಕಾರ್ಯಕ್ರಮಗಳನ್ನು ಇನ್ನಷ್ಟು ವಿಸ್ತರಿಸಿ, ಜನರ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಬೇಕು ಎಂದು ಅವರು ಸಲಹೆ ನೀಡಿದರು.

ಈ ಸಂದರ್ಭದಲ್ಲಿ 2026-27ನೇ ಸಾಲಿನ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ವಿಶ್ವನಾಥ್ ಮಾತನಾಡಿ, ಸಕಲೇಶಪುರ ಲಯನ್ಸ್ ಸಂಸ್ಥೆ ತನ್ನ ಸುವರ್ಣ ಮಹೋತ್ಸವದ (50ನೇ ವರ್ಷದ) ಸಂಭ್ರಮವನ್ನು ಆಚರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಅಧ್ಯಕ್ಷನಾಗಿ ಸೇವೆ ಸಲ್ಲಿಸುವ ಅವಕಾಶ ದೊರೆತಿರುವುದು ನನ್ನ ಜೀವನದ ಅತ್ಯಂತ ದೊಡ್ಡ ಗೌರವ ಎಂದ ಅವರು, ಇನ್ನಷ್ಟು ಜನಪರ ಹಾಗೂ ಸಮಾಜಮುಖಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದರು.

ವಿದ್ಯಾರ್ಥಿಗಳ ಶಿಕ್ಷಣಕ್ಕೆ ಪ್ರೋತ್ಸಾಹ, ಆರೋಗ್ಯ ಶಿಬಿರಗಳ ಆಯೋಜನೆ, ರಕ್ತದಾನ ಶಿಬಿರ, ಪರಿಸರ ಸಂರಕ್ಷಣೆಗೆ ವೃಕ್ಷಾರೋಪಣ, ಬಡ ಹಾಗೂ ನಿರ್ಗತಿಕ ಕುಟುಂಬಗಳಿಗೆ ನೆರವು, ಸೇರಿದಂತೆ ವಿವಿಧ ಸೇವಾ ಯೋಜನೆಗಳನ್ನು ವರ್ಷಪೂರ್ತಿ ಹಮ್ಮಿಕೊಳ್ಳಲಾಗುವುದು ಎಂದರು.

ಲಯನ್ಸ್ ಸಂಸ್ಥೆಯ ತಾಲ್ಲೂಕು ಕಾರ್ಯದರ್ಶಿಯಾಗಿ ಲಕ್ಷ್ಮಣ್ ರಾಮ್ ಗುಜಾರ್, ಖಜಾಂಚಿಯಾಗಿ ಸೋಮಶೇಖರ್, ಸಹ ಕಾರ್ಯದರ್ಶಿಯಾಗಿ ಜೈಶಂಕರ್ ಅಧಿಕಾರ ಸ್ವೀಕಾರ ಮಾಡಿದರು.

ಲಯನ್ಸ್ ಸಂಸ್ಥೆಯ ನಿಕಟ ಪೂರ್ವ ಅಧ್ಯಕ್ಷ ಗಿರೀಶ್ ಮಂಜು, ಅರುಣ್ ಶೆಟ್ಟಿ, ವಸಂತ್‌ಕುಮಾರ್ ಶೆಟ್ಟಿ, ಇತರರು ಹಾಜರಿದ್ದರು.

**ಬೆಂಗಳೂರು:** ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿ ಇರುವ ಕಾರಣ ಬಿಜೆಪಿಯಿಂದ ಆರು ಅಧ್ಯಯನ ತಂಡ ರಚನೆ ಮಾಡಲಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ತಂಡ ರಚನೆ ಮಾಡಲಾಗಿದ್ದು, ಜು.31 ರೊಳಗೆ ಪಕ್ಷಕ್ಕೆ ಅಧ್ಯಯನ ವರದಿ ಸಲ್ಲಿಕೆಗೆ ಸೂಚನೆ ನೀಡಲಾಗಿದೆ.


ಹಾಸನದ 7ನೇ ಸಿವಿಲ್ ಜಡ್ಜ್ (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ

**ಕ್ರಿ.ಮಿಸ್. 564/2026**

ಅರ್ಜಿದಾರರು : ಡಿ.ವಿ ರಮೇಶ್
ಬಿನ್ ಡಿ.ಸಿ. ವಾಸುದೇವಯ್ಯ
ಸುಮಾರು 60 ವರ್ಷ
ದುಂಡನಾಯಕನಹಳ್ಳಿ ಗ್ರಾಮ, ಕಟ್ಟಾಯ ಹೋಬಳಿ
ಹಾಸನ ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ

ರೆಸ್ಪಾಂಡೆಂಟರು : ತಹಶೀಲ್ದಾರ್‌ರವರು
ಹಾಸನ ತಾಲ್ಲೂಕು, ಹಾಸನ ಜಿಲ್ಲೆ

**ಪತ್ರಿಕಾ ಪ್ರಕಟಣೆ**

ಅರ್ಜಿದಾರರು ನನ್ನ ಪತ್ನಿಯಾದ ರತ್ನಮ್ಮ ಕೋಂ ಡಿ.ವಿ ರಮೇಶ ರವರು ದಿನಾಂಕ: 14-06-2011 ರಂದು ಮರಣ ಹೊಂದಿದ್ದು ಅರ್ಜಿದಾರರು ತಮ್ಮ ಪತ್ನಿಯ ಮರಣ ಪ್ರಮಾಣ ಪತ್ರವನ್ನು ಕೋರಿ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರ ಪತ್ನಿಯ ಮರಣ ಪತ್ರವು ಜಮೀನಿನ ಖಾತೆ ಬದಲಾವಣೆಗೆ ಅತ್ಯವಶ್ಯಕವಾಗಿರುತ್ತದೆ. ಈ ಬಗ್ಗೆ ರೆಸ್ಪಾಂಡೆಂಟರು ತಮ್ಮ ಮರಣ ನೊಂದಣಿ ವಹಿಯಲ್ಲಿ ಮರಣ ದಿನಾಂಕವನ್ನು ನೊಂದಣಿ ಮಾಡಿಕೊಂಡು ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ದಾಖಲಿಸಿರುತ್ತಾರೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಮರಣ ದೃಢೀಕರಣ ಪತ್ರ ಕೊಡುವುದರ ಬಗ್ಗೆ ಯಾರಾದರೂ ತಂಟೆ ತಕರಾರು ಅಥವಾ ವಾರಸುದಾರರುಗಳಿದ್ದಲ್ಲಿ ಅಂತಹವರುಗಳು ದಿನಾಂಕ: 11-09-2026 ರಂದು ಬೆಳಗ್ಗೆ 11-00 ಗಂಟೆಗೆ ಖುದ್ದು ಅಥವಾ ವಕೀಲರ ಮೂಲಕ ಸದರಿ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಯಾರು ಇಲ್ಲ ಎಂದು ಪರಿಗಣಿಸಿ ನಿಮ್ಮಗಳ ಗೈರು ಹಾಜರಿಯಲ್ಲಿ ಮೇಲ್ಕಂಡ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯತಕ್ಕದ್ದು. ದಿನಾಂಕ: 16-07-2026 ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಇದನ್ನು ಕೊಡಲಾಗಿದೆ.

ಅರ್ಜಿದಾರರ ಪರ ವಕೀಲರು
ವಿಶ್ವನಾಥ್ ಬಿ.ಎ.ಎಲ್.ಎಲ್.ಬಿ
ಹಾಸನ

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು
ಹಾಸನದ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಲಯದಲ್ಲಿ

ಸ್ಥಳ: ಹಾಸನ
ದಿನಾಂಕ: 16-07-2026


## ಕಾವೇರಿ: ತ.ನಾಡು ಜೊತೆ ಸಂಧಾನಕ್ಕೆ ಕರ್ನಾಟಕ ಮುಂದು

# ಆ.3ಕ್ಕೆ ಮಾತುಕತೆಗೆ ಬರುವಂತೆ ವಿಜಯ್‌ಗೆ ಆಹ್ವಾನ

• ಪ್ರಜೋದಯ ವರದಿ

**ಬೆಂಗಳೂರು:** ಕಾವೇರಿ ನೀರು ಹಂಚಿಕೆ ಸಮಸ್ಯೆ ಮತ್ತು ಮೇಕೆದಾಟು ಯೋಜನೆ ವಿಚಾರ ಸಂಬಂಧ ಸದಾ ಒಂದಿಲ್ಲೊಂದು ಕ್ಯಾತೆ ತೆಗೆಯುತ್ತಿರುವ ನೆರೆ ರಾಜ್ಯ ತಮಿಳುನಾಡಿನೊಂದಿಗೆ ಸಂಧಾನಕ್ಕೆ ಕರ್ನಾಟಕ ಮುಂದಾಗಿದೆ. ಈ ವಿಚಾರವಾಗಿ ಆಗಸ್ಟ್ 3ರಂದು ಮಾತುಕತೆಗೆ ಬರುವಂತೆ ತಮಿಳುನಾಡು ಮುಖ್ಯಮಂತ್ರಿ ವಿಜಯ್‌ಗೆ ಕರ್ನಾಟಕ ಆಹ್ವಾನ ನೀಡಿದೆ.

ಕರ್ನಾಟಕ ಮತ್ತು ತಮಿಳುನಾಡು ನಡುವೆ ಪತ್ರ ವ್ಯವಹಾರ ನಡೆದಿದ್ದರೂ ಮಾತುಕತೆಗೆ ಬರುವ ವಿಚಾರವಾಗಿ ವಿಜಯ್‌ರಿಂದ ಈವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎನ್ನಲಾಗಿದೆ. ಹೀಗಾಗಿ ತಮಿಳುನಾಡಿನ ಮುಂದಿನ ನಿರ್ಧಾರ ಏನಿರಬಹುದು ಎಂಬ ಕುತೂಹಲ ಹೆಚ್ಚಿದೆ. ಒಂದೊಮ್ಮೆ ಕರ್ನಾಟಕದ ಆಹ್ವಾನ ಒಪ್ಪಿ ವಿಜಯ್ ಬಂದಿದ್ದೇ ಆದಲ್ಲಿ ಸಂಕಷ್ಟ ಪರಿಹಾರ ಸೂತ್ರದ ಬಗ್ಗೆ ಉಭಯ ರಾಜ್ಯಗಳ ಮುಖ್ಯಮಂತ್ರಿಗಳು ಮಹತ್ವದ ಚರ್ಚೆ ನಡೆಸಲಿದ್ದಾರೆ.

ನೀರು ಬಿಡದಿರಲು ಆದೇಶಿಸಿದ್ದ ಕರ್ನಾಟಕದಲ್ಲಿ ಬರ ಪರಿಸ್ಥಿತಿ ಉಂಟಾಗಿರುವ ಹಿನ್ನೆಲೆ ತಮಿಳುನಾಡಿಗೆ ನೀರು ಬಿಡದಿರಲು ನಿನ್ನೆಯಷ್ಟೇ ಆದೇಶಿಸಿತ್ತು. ಜುಲೈ 26ರ ಬಳಿಕ ಕರ್ನಾಟಕದಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಈ ಹಿನ್ನೆಲೆ ಒಂದು ವಾರದ ಬಳಿಕ ಅಂದರೆ ಜು.28ಕ್ಕೆ ದೆಹಲಿಯಲ್ಲಿ ಕಾವೇರಿ ನೀರು ನಿರ್ವಹಣಾ ಸಮಿತಿ ಸಭೆ ನಡೆಸಿ ನೀರು ಬಿಡುವುದೋ ಅಥವಾ ಬೇಡವೋ ಎಂಬ ಬಗ್ಗೆ ನಿರ್ಧಾರ ಮಾಡುವುದಾಗಿ ತಿಳಿಸಿತ್ತು. ಈ ನಡುವೆಯೇ ಮಹತ್ವದ ಬೆಳವಣಿಗೆ ನಡೆದಿದೆ.



**ಲೋಕಸಭೆಯಲ್ಲಿ ಪ್ರತಿಭಟಿಸಿದ್ದ ಡಿಎಂಕೆ**

ಇನ್ನು ಲೋಕಸಭೆ ಅಧಿವೇಶನದ ಮೊದಲ ದಿನವೇ ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ನೆರೆ ರಾಜ್ಯ ತಮಿಳುನಾಡು ಮತ್ತೆ ಕ್ಯಾತೆ ತೆಗೆದಿತ್ತು. ಕರ್ನಾಟಕದ ಮೇಕೆದಾಟು ಯೋಜನೆಗೆ ಲೋಕಸಭೆಯಲ್ಲಿ ಡಿಎಂಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಕಲಾಪ ಆರಂಭವಾಗುತ್ತಿದ್ದಂತೆಯೇ ವಿಷಯ ಪ್ರಸ್ತಾಪ ಮಾಡಿತ್ತು. ಮೇಕೆದಾಟು ವಿಚಾರವಾಗಿ ನಿಲುವಳಿ ಸೂಚನೆಗೆ ಅವಕಾಶ ಡಿಎಂಕೆ ಕೋರಿದ್ದು, ತಕ್ಷಣವೇ ಚರ್ಚೆ ನಡೆಸಬೇಕು ಎಂದು ಪಟ್ಟು ಹಿಡಿದ ಪ್ರಸಂಗ ನಡೆದಿತ್ತು.

ಆದರೆ, ಪ್ರಸ್ತಾವನೆಗೆ ಸ್ಪೀಕರ್ ಓಂ ಬಿರ್ಲಾ ನಿರಾಕರಿಸಿದ ಕಾರಣ ಲೋಕಸಭೆ ಸದನದ ಬಾವಿಗಿಳಿದು ಡಿಎಂಕೆ ಸಂಸದರು ಪ್ರತಿಭಟನೆ ನಡೆಸಿದ್ದರು.

# ಇಂದು ರಾಜ್ಯಾದ್ಯಂತ ಭಾರೀ ಮಳೆ ಸಾಧ್ಯತೆ

**ಬೆಂಗಳೂರು:** ರಾಜ್ಯದಲ್ಲಿ ಪುಷ್ಯ ಮಳೆ ಅಬ್ಬರ ಮುಂದುವರೆದಿದ್ದು, ಜು.24 ರಂದು ಕೂಡ ಕರಾವಳಿ, ಮಲೆನಾಡು ಹಾಗೂ ಉತ್ತರ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ. ಈ ಹಿನ್ನೆಲೆ ಶುಕ್ರವಾರ 14 ಜಿಲ್ಲೆಗಳಿಗೆ ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಣೆ ಮಾಡಿದೆ.

ಭಾರತೀಯ ಹವಾಮಾನ ಇಲಾಖೆ ನೀಡಿದ ವರದಿ ಪ್ರಕಾರ, ಜು.24ರ ಬೆಳಿಗ್ಗೆ 8:30 ರಿಂದ ಜು.25ರ ಬೆಳಿಗ್ಗೆ 8:30 ರವರೆಗೆ ರಾಜ್ಯದ ಕರಾವಳಿ, ಮಲೆನಾಡು ಹಾಗೂ ಉತ್ತರ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ.

ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಬಳ್ಳಾರಿ, ಬೆಂಗಳೂರು (ಗ್ರಾಮಾಂತರ), ಬೆಂಗಳೂರು (ನಗರ), ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ರಾಮನಗರ, ತುಮಕೂರು ಹಾಗೂ ವಿಜಯನಗರ ಜಿಲ್ಲೆಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗಬಹುದು. ಹೀಗಾಗಿ, ಯಾವುದೇ ಅಲರ್ಟ್ ನೀಡಿಲ್ಲ.

ದಕ್ಷಿಣ ಕನ್ನಡದಲ್ಲಿ ಜೋರು ಮಳೆ ಹಿನ್ನೆಲೆ ಗುರುವಾರ ಶಾಲೆ ಕಾಲೇಜಿಗೆ ರಜೆ ಘೋಷಣೆ ಮಾಡಲಾಗಿತ್ತು. ಶುಕ್ರವಾರವೂ ವರುಣನ ಅಬ್ಬರ ಹೆಚ್ಚಿರಲಿದೆ. ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಒಂದು ಅಥವಾ ಎರಡು ಸ್ಥಳಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

# ಜು.27 ರಂದು ಚನ್ನಮ್ಮರವರಿಗೆ ಶ್ರದ್ಧಾಂಜಲಿ



• ಪ್ರಜೋದಯ ವರದಿ

**ಬೇಲೂರು:** ಇತ್ತೀಚೆಗೆ ನಿಧನರಾದ ಶ್ರೀಮತಿ ಚನ್ನಮ್ಮ ದೇವೇಗೌಡ ಅವರ ಸ್ಮರಣಾರ್ಥ ಸರ್ವಧರ್ಮೀಯ ಭಾವಪೂರ್ಣ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಜುಲೈ 27ರಂದು ಬೆಳಿಗ್ಗೆ 10.30ಕ್ಕೆ ಪಟ್ಟಣದ ಒಕ್ಕಲಿಗರ ಸಮುದಾಯ ಭವನದಲ್ಲಿ ನಾಗರಿಕರ ವತಿಯಿಂದ ಪಕ್ಷಾತೀತವಾಗಿ ಆಯೋಜಿಸಲಾಗಿದೆ.

ಈ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಹೆಚ್.ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜ್ ಹಾಗೂ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಡಿ.ಚಂದ್ರೇಗೌಡ, ದಿವಂಗತ ಚನ್ನಮ್ಮ ದೇವೇಗೌಡ ಅವರು ಸಮಾಜಮುಖಿ ಚಿಂತನೆ, ಮಾನವೀಯ ಮೌಲ್ಯಗಳು ಹಾಗೂ ಸಾರ್ವಜನಿಕ ಸೇವೆಯ ಮೂಲಕ ಜನಮನದಲ್ಲಿ ಅಚ್ಚಳಿಯದ ಸ್ಥಾನ ಪಡೆದಿದ್ದಾರೆ. ಅವರ ಆದರ್ಶಮಯ ಬದುಕು, ಸೇವಾ ಮನೋಭಾವ ಹಾಗೂ ಸಮಾಜಕ್ಕೆ ನೀಡಿದ ಅಮೂಲ್ಯ ಕೊಡುಗೆಗಳನ್ನು ಸ್ಮರಿಸುವ ಉದ್ದೇಶದಿಂದ ಈ ಶ್ರದ್ಧಾಂಜಲಿ ಸಭೆಯನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಧರ್ಮಗಳ ಧಾರ್ಮಿಕ ಮುಖಂಡರು, ಎಲ್ಲಾ ರಾಜಕೀಯ ಪಕ್ಷಗಳ ನಾಯಕರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ರೈತ ಮುಖಂಡರು, ಸಾರ್ವಜನಿಕರು ಹಾಗೂ ಎಲ್ಲಾ ಸಮುದಾಯಗಳ ಗಣ್ಯರು ಭಾಗವಹಿಸಿ ದಿವಂಗತರಿಗೆ ಗೌರವ ನಮನ ಸಲ್ಲಿಸಲಿದ್ದಾರೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದರ ಜೊತೆಗೆ ದಿವಂಗತ ಆತ್ಮಕ್ಕೆ ಶಾಂತಿ ಕೋರಿ ಶ್ರದ್ಧಾಂಜಲಿ ಸಲ್ಲಿಸುವಂತೆ ಮನವಿ ಮಾಡಿದ್ದಾರೆ.

ಪೂರ್ವಭಾವಿ ಸಭೆಯಲ್ಲಿ ನಟರಾಜ್ ಸಂಗಮ್, ಎಂ.ಕೆ.ಆರ್.ನಾಗೇಶ್, ಅದ್ದೂರಿ ಚೇತನ್ ಕುಮಾರ್, ಸಿದ್ದೇಶ್, ರಾಜಶೇಖರ್, ಬಸವಯ್ಯ, ಮರಿಯಪ್ಪ, ದೊಡ್ಡರೇಗೌಡ, ನಾಗೇಶ್ ಯಾದವ್, ದಿಲೀಪ್, ಮಹೇಶ್, ಮಧು, ಕಾಂತರಾಜ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.


ಹಾಸನ ಮಹಾನಗರ ಪಾಲಿಕೆ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ-573201.
web:http://www.hassancity.gov.in Email: ka.hassancmc@gmail.com ದೂರವಾಣಿ: 08172- 268276
ಸಹಾಯವಾಣಿ: 08172-233702 ಫ್ಯಾಕ್ಸ್: 08172-234792
ನಂ:ಮನಪಾಹಾ/ಕ.ಪ.ಶಾ/ಸಿಆರ್/48/2026-27
ದಿನಾಂಕ:20-07-2026

:: ಸಾರ್ವಜನಿಕ ಪ್ರಕಟಣೆ ::

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಅಧ್ಯಕ್ಷರು ಭಾರತ್ ಎಜುಕೇಷನಲ್ ಅಂಡ್ ಸೋಷಿಯಲ್ ಟ್ರಸ್ಟ್ ರಿ ವಹೀದ್ ಉಜ್ ಉಮಾ ರವರು ಈ ಕಛೇರಿಗೆ ಮನವಿ ಸಲ್ಲಿಸಿ, ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ:17, ಖಾತಾ ನಂ:3866/3726, ನಿರ್ಧರಣಾ ಸಂಖ್ಯೆ:26, ಆಬಾದ್ ಮೊಹಲ್ಲಾದಲ್ಲಿ ಪ್ರೇಯರ್ ಹಾಲ್(ಮಸೀದಿ) ನಿರ್ಮಾಣ ಮಾಡಲು ಕಟ್ಟಡ ಪರವಾನಗಿಯನ್ನು ಕೋರಿರುವುದರಿಂದ, ಸದರಿ ನಿವೇಶನದಲ್ಲಿ ಪ್ರೇಯರ್ ಹಾಲ್(ಮಸೀದಿ) ನಿರ್ಮಾಣದ ಬಗ್ಗೆ ಯಾವುದೇ ದೂರುಗಳು/ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ 15 ದಿನಗಳೊಳಗಾಗಿ ಲಿಖಿತವಾಗಿ ಆಯುಕ್ತರು/ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ಹಾಸನ ರವರಿಗೆ ದೂರನ್ನು ಸಲ್ಲಿಸಬಹುದಾಗಿರುತ್ತದೆ. ಅವಧಿ ಮೀರಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂಬುದನ್ನು ತಿಳುವಳಿಕೆಗೆ ತರಲಾಗಿದೆ.

ಸಹಿ/-ಆಯುಕ್ತರು,
ಮಹಾನಗರ ಪಾಲಿಕೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/349/ಕೆಎಸ್‌ಎಂಸಿಎ/2026-27

## ಪಾಲಿಕೆ ಅಭಿವೃದ್ಧಿಗೆ 200 ಕೋ.ರೂ. ಭರವಸೆ

» ಮೊದಲನೇ ಪುಟದಿಂದ

ಸೌಕರ್ಯಗಳ ಬೇಡಿಕೆ ಹೆಚ್ಚಾಗಿದೆ. ಆದರೆ, ಸಮರ್ಪಕ ಅನುದಾನ ದೊರೆಯದ ಕಾರಣ, ಸದ್ಯ ಪಾಲಿಕೆಯ ತೆರಿಗೆ ಸಂಗ್ರಹದಿಂದಲೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಈಗಾಗಲೇ ಸುಮಾರು 14 ರಿಂದ 15 ಕೋ.ರೂ. ಮೊತ್ತವನ್ನು ವಿವಿಧ ಕಾಮಗಾರಿಗಳಿಗೆ ಬಳಸಲಾಗಿದೆ ಎಂದು ಮಾಹಿತಿ ನೀಡಿದರು.

ಕುವೆಂಪು ನಗರ ಬಡಾವಣೆಯಲ್ಲಿ ಹಲವು ವರ್ಷಗಳ ಹಿಂದೆ ನಿರ್ಮಿಸಲಾಗಿದ್ದ ಯುಜಿಡಿ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಸ್ಥಳೀಯ ನಿವಾಸಿಗಳು ಒಳಚರಂಡಿ ಸಮಸ್ಯೆ ಯಿಂದ ತೀವ್ರ ಸಂಕಷ್ಟ ಅನುಭವಿಸುತ್ತಿದ್ದರು. ಸಾರ್ವಜನಿಕರು ಹಾಗು ಸ್ಥಳೀಯ ಮುಖಂಡರ ಮನವಿಯ ಹಿನ್ನಲೆ, ಮಾಜಿ ನಗರಸಭಾ ಸದಸ್ಯ ಕಮಲ್ ಕುಮಾರ್ ಅವರ ಸಲಹೆಯಂತೆ 30 ಲ.ರೂ. ವೆಚ್ಚದಲ್ಲಿ ಹೊಸ ಯುಜಿಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು

ಕುವೆಂಪು ನಗರದಲ್ಲಿ ಯುಜಿಡಿ ಯಷ್ಟೇ ಅಲ್ಲದೆ ರಸ್ತೆ, ಚರಂಡಿ ಸೇರಿ ಹಲವು ಮೂಲಸೌಕರ್ಯ ಸಮಸ್ಯೆಗಳಿದ್ದು, ಅವುಗಳನ್ನು ಹಂತ-ಹಂತ ವಾಗಿ ಪರಿಹರಿಸಲಾಗುವುದು. ಅಭಿವೃದ್ಧಿ ಕಾಮಗಾರಿಗಳ ಯಶಸ್ಸಿಗೆ ಸಾರ್ವಜನಿಕರ ಸಹಕಾರವೂ ಅಗತ್ಯ ಎಂದರು. ಮುಖಂಡರಾದ ಗಿರೀಗೌಡ, ಶಂಕರ್, ವೆಂಕಟೇಶ್ ಇತರರು ಉಪಸ್ಥಿತರಿದ್ದರು.

# ಮಕ್ಕಳ ಭವಿಷ್ಯಕ್ಕಾಗಿ ಪ್ರತಿಭಟನೆ: ಡಿ.ಕೆ.ಶಿವಕುಮಾರ್

## ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಲಿ | ಮೋದಿಗೆ ಪರಮೇಶ್ವರ್ ಪತ್ರ

• ಪ್ರಜೋದಯ ವರದಿ



**ಬೆಂಗಳೂರು:** ನಾವೆಲ್ಲರೂ ಮಕ್ಕಳ ಭವಿಷ್ಯಕ್ಕಾಗಿ ಪ್ರತಿಭಟನೆ ಮಾಡುತ್ತಿದ್ದೇವೆ, ಈ ಹೋರಾಟಕ್ಕೆ ದೇಶದ ಪ್ರತಿಯೊಬ್ಬರು ಬೆಂಬಲ ನೀಡಬೇಕೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಬೆಂಗಳೂರಿನಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ 12 ವರ್ಷಗಳಲ್ಲಿ 100ಕ್ಕೂ ಹೆಚ್ಚು ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಇಡೀ ದೇಶ ಮತ್ತು ವಿಶ್ವ ಯುವಕರ ಭವಿಷ್ಯದ ಬಗ್ಗೆ ಯೋಚನೆ ಮಾಡುತ್ತಿದೆ. ಭಾರತ ಟ್ಯಾಲೆಂಟ್ ಹಬ್. ನಮ್ಮ ಟ್ಯಾಲೆಂಟ್ ಇಡೀ ಪ್ರಪಂಚದಲ್ಲಿ ಇಲ್ಲ. ಇಂತಹ ಸಮಯದಲ್ಲಿ ನಾವು ಗುಣಮಟ್ಟ ಕಾಪಾಡಿ ಕೊಳ್ಳಬೇಕು. ಈ ರೀತಿ ಪ್ರಶ್ನೆಪತ್ರಿಕೆ ಸೋರಿಕೆ ಆದರೆ ಸಂಬಂಧಪಟ್ಟವರು ಹೊಣೆ ಹೊರಬೇಕಲ್ಲವೇ ಎಂದು ಪ್ರಶ್ನಿಸಿದರು. ಮಕ್ಕಳ ಭವಿಷ್ಯ ಹಾಳಾಗುತ್ತಿದೆ ಎಂದು ದೆಹಲಿ ಯಲ್ಲಿ ಪ್ರತಿಭಟನೆ ನಡೆಸಲಾಗುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆ ಎಲ್ಲರ ಹಕ್ಕು. ಪ್ರತಿಭಟನೆ ಮಾಡುವುದು ಎಲ್ಲಾ ಪಕ್ಷ, ಯುವಕರ ಹಕ್ಕು ಎಂದರು.

ಪ್ರತಿಭಟನೆ ಮಾಡುವವರ ಮೇಲೆ ಲಾಠಿ ಜಾರ್ಜ್ ಮಾಡಿ, ತೊಂದರೆ ಕೊಡುವ ಸುದ್ದಿ ಸಾಮಾಜಿಕ ಮಾಧ್ಯಮಗಳಲ್ಲಿ ಮಾತ್ರ ಗೋಚರವಾಗುತ್ತಿದೆ. ಮುಖ್ಯ ವಾಹಿನಿ ಮಾಧ್ಯಮಗಳು ಅದನ್ನು ತೋರಿಸುತ್ತಿಲ್ಲ. ಮಾಧ್ಯಮಗಳು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳ ಬಾರದೆಂದರು. ಈ ಪ್ರತಿಭಟನೆಗೆ ನಾವು ಬೆಂಬಲ ಕೊಟ್ಟಿದ್ದೇವೆ. ಮಕ್ಕಳ ಭವಿಷ್ಯ ಹಾಳಾಗುತ್ತಿದೆ. ಪೋಷಕರು ಬೀದಿಗಿಳಿದು ಹೋರಾಡಬೇಕು. ಕೇಂದ್ರ ಶಿಕ್ಷಣ ಸಚಿವರು ರಾಜೀನಾಮೆ ನೀಡೇಕೆಂದು ಆಗ್ರಹಿಸಿದರು.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿರುದ್ಧ ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆ ಜಟಾಪಟಿ ವಿಚಾರವಾಗಿ ಕೇಂದ್ರದ ನಡೆಯನ್ನು ಪ್ರಶ್ನಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಅವರು ಪತ್ರ ಬರೆದಿದ್ದಾರೆ. ವಿದ್ಯಾರ್ಥಿಗಳ ಶಾಂತಿಯುತ ಪ್ರತಿಭಟನೆ ಹತ್ತಿಕ್ಕಲಾಗುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿರುವ ಅವರು, ನೀಟ್ ರದ್ದುಪಡಿಸಿ ಮತ್ತು ಪಾರದರ್ಶಕತೆ, ಅರ್ಹತೆಯ ಆಧಾರದ ಸಿಇಟಿಯನ್ನು ಮರುಸ್ಥಾಪಿಸಬೇಕು. ಕಾಲಮಿತಿಯಲ್ಲಿ ಪಾರದರ್ಶಕ ತನಿಖೆಗೆ ಕ್ರಮ ವಹಿಸಬೇಕು. ಪ್ರಶ್ನೆ ಪತ್ರಿಕೆ ಸೋರಿಕೆ ವಿಚಾರದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಕುಟುಂಬಕ್ಕೆ ಹಾಗು ಹೋರಾಟದಲ್ಲಿ ಗಾಯಗೊಂಡವರಿಗೆ ಪರಿಹಾರ ಒದಗಿಸಬೇಕು. ಲಾಠಿ ಚಾರ್ಜ್ ಹಾಗು ಅಶ್ರುವಾಯು ದಾಳಿಗೆ ಹೊಣೆಗಾರರು ಯಾರು ಎಂಬುದನ್ನು ತಿಳಿಸಬೇಕು. ವಿದ್ಯಾರ್ಥಿಗಳು ಹಾಗು ಶಿಕ್ಷಣ ತಜ್ಞರ ಜೊತೆ ಅರ್ಥಪೂರ್ಣ ಸಂವಾದ ನಡೆಸಬೇಕು. ನಮ್ಮ ಶಿಕ್ಷಣ ವ್ಯವಸ್ಥೆ ಮೇಲಿನ ಸಾರ್ವಜನಿಕರ ವಿಶ್ವಾಸಾರ್ಹತೆಯನ್ನು ಮರುಸ್ಥಾಪಿಸಬೇಕೆಂದು ಪತ್ರದ ಮೂಲಕ ಆಗ್ರಹಿಸಿದ್ದಾರೆ.

### ಕಾಂಗ್ರೆಸ್ ಕಚೇರಿಗೆ ಕಲ್ಲು

ದೇಶದಲ್ಲಿ ಅಸ್ಥಿರತೆ ಸೃಷ್ಟಿಸಲು ಕಾಂಗ್ರೆಸ್ ಕುತಂತ್ರ ಮಾಡುತ್ತಿದೆ ಹಾಗು ರಾಜ್ಯದ ಗಂಭೀರ ಸಮಸ್ಯೆಗಳನ್ನು ಕಡೆಗಣಿಸಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಯಲ್ಲಿ ನಡೆದ ಪ್ರತಿ ಭಟನೆಯಲ್ಲಿ ಪಾಲ್ಗೊಂಡಿದ್ದಾರೆಂದು ಆರೋಪಿಸಿ ಕೊಪ್ಪಳದಲ್ಲಿ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಕಚೇರಿಗೆ ಕಲ್ಲೆಸೆದ ಘಟನೆ ನಡೆದಿದೆ.
ನಗರದ ಬಸವೇಶ್ವರ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ರಾಹುಲ್ ಗಾಂಧಿ ಭಾವ ಚಿತ್ರ ದಹಿಸಿ ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಕೆಲವರನ್ನು ವಶಕ್ಕೆ ಪಡೆದರು. ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ ಸೇರಿ ಪಕ್ಷದ ಹಲವು ಮುಖಂಡರು ಪೊಲೀಸರ ವಿರೋಧವನ್ನೂ ಲೆಕ್ಕಿಸದೆ ಕಾಂಗ್ರೆಸ್ ಕಚೇರಿ ಮುಂಭಾಗಕ್ಕೆ ಬಂದು ಕಚೇರಿ ಮೇಲೆ ಕಲ್ಲು ಎಸೆದರು. ಕೆಲ ಮುಖಂಡರು ಇಟ್ಟಿಗೆಯನ್ನು ಕಚೇರಿಯ ಗಾಜಿಗೆ ತೂರಿದರು. ಆಗ ಬಿಜೆಪಿ ಮುಖಂಡರು, ಕಾರ್ಯಕರ್ತರು ಹಾಗು ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಬಳಿಕ ಪೊಲೀಸರು ಎಲ್ಲರನ್ನೂ ವಶಕ್ಕೆ ಪಡೆದು ಬಿಡುಗಡೆ ಮಾಡಿದರು.

## ಎ.ಟಿ.ಆರ್. ಸಕ್ರಿಯ ರಾಜಕಾರಣಕ್ಕೆ ಮರಳಲಿ: ಆಗ್ರಹ



• ಪ್ರಜೋದಯ ವರದಿ

**ಅರಕಲಗೂಡು:** ಸಕ್ರಿಯ ರಾಜಕಾರಣದಿಂದ ಬೇಸತ್ತು ಹಿಂದೆ ಸರಿದಿದ್ದ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಅವರು ಜನರ ಏಳಿಗೆ ದೃಷ್ಟಿಯಿಂದ ರಾಜಕಾರಣಕ್ಕೆ ಬರಬೇಕೆಂದು ಅವರ ಅಭಿಮಾನಿಗಳು ಹಾಗು ಹಿತೈಷಿಗಳು ಆಗ್ರಹಿಸಿದ್ದಾರೆ.

ತಾಲ್ಲೂಕಿನ ಅಭಿವೃದ್ಧಿ, ರೈತರ ಹಾಗು ಬಡವರ ಹಿತದೃಷ್ಟಿಯಿಂದ ಮತ್ತೆ ರಾಜಕೀಯ ಅಖಾಡಕ್ಕೆ ಮರಳಬೇಕೆಂದು ರಾಮನಾಥಪುರದ ಪ್ರವಾಸಿ ಮಂದಿರ ಆವರಣದಲ್ಲಿ ಗುರುವಾರ ನಡೆದ ಎ.ಟಿ.ರಾಮಸ್ವಾಮಿ ಅಭಿಮಾನಿ ಬಳಗದ ಹೋಬಳಿ ಮಟ್ಟದ ಕಾರ್ಯಕರ್ತರ ಸಭೆಯಲ್ಲಿ ಒತ್ತಾಯ ಕೇಳಿಬಂದಿತು.

ಅಭಿಮಾನಿ ಬಳಗದ ಸದಸ್ಯ ದಿವಾಕರ್ ಅವರು ಮಾತನಾಡಿ, ಎ.ಟಿ.ರಾಮಸ್ವಾಮಿ ಅವರು ಶಾಸಕರಾಗಿದ್ದ ಅವಧಿಯಲ್ಲಿ ಅಭಿವೃದ್ಧಿಗೆ ಹೊಸ ದಿಕ್ಕು ನೀಡಿದ್ದರು. ಜನಪರ ರಾಜಕಾರಣದ ಮೂಲಕ ರೈತರು, ಬಡವರು ಹಾಗು ಸಾಮಾನ್ಯ ಜನರ ವಿಶ್ವಾಸ ಗಳಿಸಿದ್ದರು. ಇಂತಹ ನಾಯಕತ್ವ ತಾಲ್ಲೂಕಿಗೆ ಅಗತ್ಯವಾಗಿದೆ. ಆದ್ದರಿಂದ ಅವರು ಮತ್ತೆ ಸಕ್ರಿಯ ರಾಜಕಾರಣಕ್ಕೆ ಬರಲೇಬೇಕೆಂದು ಒತ್ತಾಯಿಸಿದರು.

ಮುಂದಿನ ದಿನಗಳಲ್ಲಿ ತಾಲ್ಲೂಕಿನ ಎಲ್ಲಾ ಹೋಬಳಿಗಳ ಅಭಿಮಾನಿಗಳು, ಹಿತೈಷಿಗಳು ಹಾಗು ಬೆಂಬಲಿಗರನ್ನು ಒಗ್ಗೂಡಿಸಿ ರಾಮಸ್ವಾಮಿ ಅವರನ್ನು ಭೇಟಿ ಮಾಡಿ ಮತ್ತೆ ರಾಜಕೀಯಕ್ಕೆ ಮರಳುವಂತೆ ಮನವಿ ಸಲ್ಲಿಸುವ ನಿರ್ಧಾರವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ರಾಮನಾಥಪುರದಲ್ಲಿ ನಡೆದ ಈ ಸಭೆ ಎ.ಟಿ.ರಾಮಸ್ವಾಮಿ ಅವರ ರಾಜಕೀಯ ಮರು ಪ್ರವೇಶದ ಚರ್ಚೆಗೆ ಹೊಸ ವೇದಿಕೆ ಕಲ್ಪಿಸಿದ್ದು, ಮುಂದಿನ ದಿನಗಳಲ್ಲಿ ಈ ಅಭಿಯಾನ ತಾಲ್ಲೂಕು ಮಟ್ಟದಲ್ಲಿ ಮತ್ತಷ್ಟು ಚುರುಕುಗೊಳ್ಳುವ ಸಾಧ್ಯತೆ ಇದೆ.

ಸಭೆಯಲ್ಲಿ ಉಪ್ಪರಿಕೆಗೌಡ, ರಾಮೇಗೌಡ, ವಿರೂಪಾಕ್ಷ, ಬಿ.ಸಿ.ವೀರೇಶ್, ಪುಟ್ಟರಾಜೇಗೌಡ, ಮಹೇಶ್, ಮಹದೇವ್, ಶಿವೇಗೌಡ, ಶಂಕರೇಗೌಡ, ಗಂಗಾಧರ್, ತಿಪ್ಪೇಗೌಡ, ಸಣ್ಣೇಗೌಡ, ಸ್ವಾಮಿಗೌಡ, ಬಿ.ಸಿ.ಹೊನ್ನೇಗೌಡ ಮತ್ತಿತರರಿದ್ದರು.

## ತೋಟದಲ್ಲಿ ಮರಿಗಳೊಂದಿಗೆ ಕಾಡಾನೆಗಳ ದಾಂಧಲೆ

• ಪ್ರಜೋದಯ ವರದಿ



**ಬೇಲೂರು:** ಮರಿಗಳೊಂದಿಗೆ 20ಕ್ಕೂ ಹೆಚ್ಚು ಕಾಡಾನೆಗಳ ಹಿಂಡು ಕಾಫಿ ತೋಟಕ್ಕೆ ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿ ಉಂಟುಮಾಡಿರುವ ಘಟನೆ ತಾಲ್ಲೂಕಿನ ಚೀಕನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಜಗನ್ನಾಥ್ ಶೆಟ್ಟಿ, ಪ್ರಭಾಕರ್ ಶೆಟ್ಟಿ ಹಾಗು ಸ್ವಾಮಿ ಅವರಿಗೆ ಸೇರಿದ ಎಂಟು ಎಕರೆ ಪ್ರದೇಶದ ಕಾಫಿ ತೋಟಕ್ಕೆ ನುಗ್ಗಿದ ಗಜಪಡೆ ಕಾಫಿ, ಅಡಿಕೆ ಹಾಗು ಬಾಳೆ ಬೆಳೆಗಳನ್ನು ನಾಶ ಪಡಿಸಿದೆ. ಈ ಘಟನೆಯಿಂದ 6ಲಕ್ಷಕ್ಕೂ ಅಧಿಕ ನಷ್ಟ ಸಂಭವಿಸಿದೆ ಎಂದು ಬೆಳೆಗಾರರು ಅಂದಾಜಿಸಿದ್ದಾರೆ.

ಮರಿಗಳು ಸೇರಿ 20ಕ್ಕೂ ಹೆಚ್ಚು ಕಾಡಾನೆಗಳು ತೋಟದಲ್ಲೇ ಬೀಡು ಬಿಟ್ಟಿರುವುದರಿಂದ ಗ್ರಾಮಸ್ಥರಲ್ಲಿ ಆತಂಕ ಮನೆಮಾಡಿದೆ. ಮರಿಗಳು ಹಿಂಡಿನಲ್ಲಿರುವ ಕಾರಣ ಹೆಚ್ಚು ಆಕ್ರಮಣಕಾರಿ ಸ್ವಭಾವ ತಾಳುವ ಸಾಧ್ಯತೆ ಇರುವುದರಿಂದ ಅವುಗಳನ್ನು ಓಡಿಸಲು ಪಟಾಕಿ ಸಿಡಿಸಲು ಅರಣ್ಯ ಇಲಾಖೆಯ ಇಟಿಎಫ್ ಸಿಬ್ಬಂದಿ ಹಿಂದೇಟು ಹಾಕಿದ್ದಾರೆ.

ಪಟಾಕಿ ಸಿಡಿಸಿದರೆ ಕಾಡಾನೆಗಳು ಉದ್ರಿಕಗೊಂಡು ಜನರ ಮೇಲೆ ದಾಳಿ ನಡೆಸುವ ಅಪಾಯ ಇರುವುದರಿಂದ ಅರಣ್ಯ ಇಲಾಖೆ ಎಚ್ಚರಿಕೆಯಿಂದ ಕಾರ್ಯಾಚರಣೆ ನಡೆಸುತ್ತಿದೆ. ಕಾಫಿ ತೋಟದಲ್ಲೇ ಬೀಡುಬಿಟ್ಟಿರುವ ಗಜಪಡೆಯನ್ನು ಸುರಕ್ಷಿತವಾಗಿ ಅರಣ್ಯ ಪ್ರದೇಶಕ್ಕೆ ಮರಳಿಸುವ ಪ್ರಯತ್ನ ಮುಂದುವರಿದಿದೆ. ನಿರಂತರವಾಗಿ ಕಾಡಾನೆಗಳ ಹಾವಳಿಯಿಂದ ಬೆಳೆ ನಷ್ಟ ಅನುಭವಿಸುತ್ತಿರುವ ರೈತರು, ಶಾಶ್ವತ ಪರಿಹಾರ ಕಲ್ಪಿಸಿ ಸೂಕ್ತ ಪರಿಹಾರಧನ ನೀಡುವಂತೆ ಆಗ್ರಹಿಸಿದ್ದಾರೆ.

ತಾಲ್ಲೂಕಿನ ಕಾನಹಳ್ಳಿ ಅರಣ್ಯ ಸಮೀಪದ ಸಮರ್ಥ್ ಅವರ ತೋಟ ನೇರ್ಲಮಕ್ಕಿ, ಶಿರಗುರ ಬಿದಿರು ಕಾಡು ಮತ್ತು ಶ್ರೀಗಂಧ ತೋಟದ ಹತ್ತಿರದ ಶರತ್ ಚಂದ್ರ ಅವರ ತೋಟ, ಶಿರಗುರ ಎಸ್ಟೇಟ್, ಕೋಗೋಡು ಗ್ರಾಮದ ಅರಮನೆ ಗುಡ್ಡ, ಸಾದಿನೆ ಗ್ರಾಮದ ಕುಂಬಾರಹಳ್ಳಿ ಹತ್ತಿರದ ಕುಮಾರ ಗೌಡರ ತೋಟ ಮತ್ತು ಮರೀಗೌಡರ ತೋಟ, ಕಾನಹಳ್ಳಿ ಗ್ರಾಮದ ತೀರ್ಥಮಲ್ಲೇಶ್ ಅವರ ತೋಟದ ಹತ್ತಿರದ ಕಾನಹಳ್ಳಿ ಫಾರೆಸ್ಟ್, ಬಕ್ಕರವಳ್ಳಿ ಬಿ.ಟಿ.ರಾಜಶೇಖರ್ ಅವರ ತೋಟ, ಬೇಡಿ ಎಸ್ಟೇಟ್ ಕೋಗೋಡು, ಹೊಳಲು ಗ್ರಾಮದ ಜೈದೀಪ್ ಎಸ್ಟೇಟ್, ಅಂಕಿಹಳ್ಳಿ ಹಾಗು ಕೊಡಗನಹಳ್ಳಿ ಸುತ್ತಮುತ್ತ ಕಾಡಾನೆಗಳು ಕಂಡುಬಂದಿವೆ.

## ಚೆನ್ ಯುಫೈಗೆ ಮಣಿದ ಪಿ.ವಿ.ಸಿಂಧು

ಚಾಂಗ್‌ಝೌ: ಭಾರತದ ಅಗ್ರಮಾನ್ಯ ಆಟಗಾರ್ತಿ ಪಿ.ವಿ.ಸಿಂಧು ಅವರು ಚೀನಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಸ್ಥಳೀಯ ಆಟಗಾರ್ತಿ ಹಾಗೂ ವಿಶ್ವದ ನಾಲ್ಕನೇ ಕ್ರಮಾಂಕದ ಚೆನ್ ಯುಫೈ ಎದುರು ಗುರುವಾರ ಮೂರು ಗೇಮ್‌ಗಳ ತೀವ್ರ ಸೆಣಸಾಟದಲ್ಲಿ ಸೋಲನು ಭವಿಸಬೇಕಾಯಿತು.

ಸೂಪರ್ 1000 ದರ್ಜೆಯ ಈ ಟೂರ್ನಿಯ ಮಹಿಳಾ ಸಿಂಗಲ್ಸ್ ಪಂದ್ಯದಲ್ಲಿ ಚೆನ್ 16-21, 22-20, 21-18 ರಿಂದ ಹೈದರಾಬಾದಿನ ಆಟಗಾರ್ತಿಯ ಸವಾಲನ್ನು ಹಿಮ್ಮೆಟ್ಟಿಸಿದರು. 30 ವರ್ಷ ವಯಸ್ಸಿನ ಸಿಂಧು ಹೋದ ವಾರ ನಡೆದಿದ್ದ ಜಪಾನ್ ಓಪನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಚೀನಾದ ಈ ಆಟಗಾರ್ತಿಯನ್ನು ಸೋಲಿಸಿದ್ದರು.

ಆರಂಭದಿಂದಲೇ ಈ ಪಂದ್ಯದಲ್ಲಿ ಹೋರಾಟ ಕಂಡಿತು. ಸಿಂಧು 7-13 ಹಿನ್ನಡೆಯಿಂದ ಚೇತರಿಸಿದ್ದರು. ನಂತರ ಸ್ಕೋರ್ ಒಂದು ಹಂತದಲ್ಲಿ 16-16 ಸಮನಾಗಿತ್ತು. ನಂತರ ಸಿಂಧು ಸತತ ಐದು ಪಾಯಿಂಟ್ಸ್ ಕಲೆಹಾಕಿ ಮೊದಲ ಗೇಮ್ ತಮ್ಮದಾಗಿಸಿಕೊಂಡರು.

**ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟನೆ | ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹ**

## ನೀಟ್ ಅಕ್ರಮ: ಜಿಲ್ಲೆಯಲ್ಲೂ ಬೀದಿಗಿಳಿದ ವಿದ್ಯಾರ್ಥಿಗಳು

• ಪ್ರಜೋದಯ ವರದಿ




**ಹಾಸನ:** ನೀಟ್ ಅಕ್ರಮದ ವಿರುದ್ಧ ಜಿಲ್ಲೆಯಲ್ಲೂ ವಿದ್ಯಾರ್ಥಿಗಳು ಬೀದಿಗಿಳಿದು, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ಎಸ್‌ಎಫ್‌ಐ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಆವರಣದಲ್ಲಿ ಗುರುವಾರ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರಮೇಶ್ ಅವರು, ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಮೇ 3ರಂದು ನಡೆಸಲಾದ ನೀಟ್ ಪರೀಕ್ಷೆಯಲ್ಲಿ ಸುಮಾರು 22 ಲಕ್ಷ ವಿದ್ಯಾರ್ಥಿಗಳು ಬರೆದಿದ್ದರು. ಆದರೆ, ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ ಹಿನ್ನಲೆ ಪರೀಕ್ಷೆಯನ್ನು ರದ್ದುಗೊಳಿಸಿ, ಮರುಪರೀಕ್ಷೆ ಮಾಡಲಾಗಿದೆ. ಇದರ ಪರಿಣಾಮವಾಗಿ ದೇಶದಲ್ಲಿ 21 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ದೂರಿದರು.

ಆರಂಭದಿಂದಲೂ ಪರೀಕ್ಷೆಗಳ ದುರುಪಯೋಗಕ್ಕೆ ಕುಖ್ಯಾತವಾಗಿರುವ ಎನ್.ಟಿ.ಎ ಪರೀಕ್ಷೆಗಳ ನಿರ್ವಹಣೆಯಲ್ಲಿ ತನ್ನ ಅಸಮರ್ಥತೆಯನ್ನು ಮತ್ತೊಮ್ಮೆ ಸಾಬೀತು ಪಡಿಸುತ್ತಿದೆ. ಈ ಹಿಂದೆ 89 ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿದೆ ಹಾಗು 48 ಮರು ಪರೀಕ್ಷೆ ಮಾಡಲಾಗಿದೆ. ಇಂತಹ ಅಸಮರ್ಥ ಎನ್‌ಟಿಎ ಸಂಸ್ಥೆಯನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸಿದರು.

ಸೋನಂ ವಾಂಗ್ಚುಕ್ ಅವರ ಶಾಂತಿಯುತ ಉಪವಾಸ ಸತ್ಯಾಗ್ರಹದ 20 ದಿನಗಳ ನಂತರ ನಡೆದಿರುವ ಈ ಅಧಿಕಾರ ದುರುಪಯೋಗದ ಕ್ರಮವು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ಹಾಗು ಶಾಂತಿಯುತ ಪ್ರತಿಭಟನೆಯ ಸಂವಿಧಾನಬದ್ಧ ಹಕ್ಕಿನ ಮೇಲಿನ ನಾಚಿಕೆಗೇಡಿನ ದಾಳಿಯಾಗಿದೆ. ಪ್ರತಿಭಟನಾಕಾರರೊಂದಿಗೆ ಶಾಂತಿಯುತ ಹಾಗು ಪ್ರಜಾಸತ್ತಾತ್ಮಕ ಸಂವಾದ ನಡೆಸುವ ಬದಲು, ಕೇಂದ್ರ ಸರ್ಕಾರವು ಪೊಲೀಸ್ ಕ್ರಮದ ಮೂಲಕ ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕುವ ಮಾರ್ಗವನ್ನು ಆರಿಸಿಕೊಂಡಿದೆ ಎಂದು ಆಕ್ರೋಶವನ್ನು ವ್ಯಕ್ತಪಡಿಸಿದರು.

ಸಂಸತ್ ಚಲೋ ಮೂಲಕ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಪ್ರತಿಭಟನಾಕಾರರ ಮೇಲೆ ಲಾಠಿ ಚಾರ್ಜ್, ಅಶೃವಾಯು, ರಬ್ಬರ್ ಬುಲೆಟ್‌ಗಳನ್ನು ಸಿಡಿಸಲಾಗಿದೆ. ಪಲೀಸರ ಇಂತಹ ಗೂಂಡಾವರ್ತನೆಯನ್ನು ಎಸ್.ಎಫ್.ಐ. ತೀವ್ರವಾಗಿ ಖಂಡಿಸುತ್ತದೆ. ಬಲವಂತವಾಗಿ ವಶಕ್ಕೆ ಪಡೆದಿರುವ ಎಲ್ಲಾ ವಿದ್ಯಾರ್ಥಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು.

ನಮ್ಮ ದೇಶದ ಪ್ರಜಾಸತ್ತಾತ್ಮಕ ಪರಂಪರೆಗೆ ಕಪ್ಪು ಚುಕ್ಕೆಯಾಗಿದೆ. ಸರ್ಕಾರವು ಶಾಂತಿಯುತ ಪ್ರತಿಭಟನೆಗಳಿಗೆ ಸಂವಾದ ಮತ್ತು ಹೊಣೆಗಾರಿಕೆಯ ಮೂಲಕ ಸ್ಪಂದಿಸಬೇಕು, ಬಲಪ್ರಯೋಗ ಮತ್ತು ಬೆದರಿಕೆಯ ಮೂಲಕವಲ್ಲ. ಭಿನ್ನಾಭಿಪ್ರಾಯಗಳನ್ನು ಮಣಿಸಲು ಪೊಲೀಸ್ ಬಲವನ್ನು ಹೆಚ್ಚಾಗಿ ಬಳಸುತ್ತಿರುವುದು ಪ್ರಜಾಪ್ರಭುತ್ವದ ಅಡಿಪಾಯವನ್ನೇ ದುರ್ಬಲಗೊಳಿಸುವ ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದೆ ಎಂದರು.

ಪ್ರಶ್ನೆಪತ್ರಿಕೆ ಸೋರಿಕೆಯ ಬಗ್ಗೆ ಸರಿಯಾದ ತನಿಖೆಗೆ ನಡೆಸಬೇಕು. ಮುಂದಿನ ದಿನಗಳಲ್ಲಿ ನಮ್ಮ ಬೇಡಿಕೆ ಇಡೇರದಿದ್ದರೆ ದೊಡ್ಡಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುತ್ತದೆ ಎಂದು ಎಚ್ಚರಿಸಿ ಜಿಲ್ಲಾಡಳಿತದ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಎಸ್‌ಎಫ್‌ಐ ಜಿಲ್ಲಾ ಮುಖಂಡ ವಿವೇಕ್, ಅಹರ್ನಿಶಿ, ಡಿವೈಎಫ್ ಪೃಥ್ವಿ ಎಂ.ಜಿ, ರೈತ ಮುಖಂಡರಾದ ಹೆಚ್.ಆರ್.ನವೀನ್ ಕುಮಾರ್, ಧರ್ಮೇಶ್, ಕೃಷ್ಣದಾಸ್, ಪರಮಶಿವಯ್ಯ, ಹರೀಶ್ ಕಟ್ಟೆಬೆಳಗುಲಿ, ಶಶಿ, ರಾಜು ಇನ್ನಿತರರಿದ್ದರು.

## ಕಚ್ಚಾ ತೈಲ ಬೆಲೆಯಲ್ಲಿ ಮತ್ತೆ ಏರಿಕೆ ಸಾಧ್ಯತೆ

• ಪ್ರಜೋದಯ ವರದಿ




**ನವದೆಹಲಿ:** ಅಮೇರಿಕಾ ಮತ್ತು ಇರಾನ್ ನಡುವಿನ ಸಂಘರ್ಷ ಮುಂದುವರಿದಿರುವುದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆಗಳಲ್ಲಿ ಭಾರೀ ಏರಿಕೆ ಕಂಡು ಬಂದಿದೆ. ಭಾರತದಲ್ಲೂ ಪೆಟ್ರೋಲ್-ಡೀಸೆಲ್ ಬೆಲೆಯಲ್ಲಿ ಹೆಚ್ಚಳವಾಗುವ ಸಾಧ್ಯತೆ ಇದೆ.

ಅಂತಾರಾಷ್ಟ್ರೀಯ ಮಾನದಂಡವಾಗಿರುವ ಬ್ರೆಂಟ್ ಕಚ್ಚಾ ತೈಲ ಬೆಲೆಯು ಶೇ.1.2ಕ್ಕೂ ಹೆಚ್ಚು ಏರಿಕೆಯಾಗಿದ್ದು, ಪ್ರತಿ ಬ್ಯಾರಲ್‌ಗೆ 92.09 ಡಾಲರ್‌ಗೆ (8,800 ರೂ.) ತಲುಪಿದೆ. ಇದು ಜೂನ್ ತಿಂಗಳ ಬಳಿಕ ದಾಖಲಾದ ಅತಿ ಹೆಚ್ಚಿನ ಬೆಲೆಯಾಗಿದೆ.

ಅದೇ ರೀತಿ ಅಮೆರಿಕಾದ ಪ್ರಮುಖ ಕಚ್ಚಾತೈಲ ಮಾನದಂಡವಾದ ಡಬ್ಲ್ಯೂಟಿಐ ದರ ಕೂಡ ಶೇ.1.1ರಷ್ಟು ಏರಿಕೆಯಾಗಿದ್ದು, ಬ್ಯಾರಲ್‌ಗೆ 85.23 ಡಾಲರ್‌ಗೆ ಏರಿಕೆಯಾಗಿದೆ. ಜಗತ್ತಿನ ಸುಮಾರು ಶೇ.20 ರಷ್ಟು ತೈಲ ಸಾಗಣೆಯಾಗುವ ಪ್ರಮುಖ ಸಮುದ್ರ ಮಾರ್ಗವಾದ ಹೊರ್ಮುಜ್ ಜಲಸಂಧಿಯಲ್ಲಿ ಇರಾನ್ ತೈಲ ಟ್ಯಾಂಕರ್‌ಗಳನ್ನು ತಡೆದು ದಾಳಿ ನಡೆಸಿದೆ.

ಅಮೇರಿಕಾದ ಸೇನಾ ನೆಲೆಗಳು ಹಾಗು ರೇಡಾರ್ ಕೇಂದ್ರಗಳನ್ನು ಗುರಿಯಾಗಿಸಿ ಇರಾನ್ ಸರಣಿ ದಾಳಿ ನಡೆಸಿದ್ದು, ಪ್ರತಿಯಾಗಿ ಅಮೇರಿಕಾ ಕೂಡ ಇರಾನ್ ಆಸ್ತಿಗಳ ಮೇಲೆ ಬಾಂಬ್ ದಾಳಿ ನಡೆಸಿದೆ. ಅದರಿಂದಾಗಿ ಜಾಗತಿಕ ತೈಲ ಪೂರೈಕೆಯಲ್ಲಿ ಭಾರೀ ವ್ಯತ್ಯಯ ಉಂಟಾಗುವ ಭೀತಿ ಎದುರಾಗಿದೆ.

ಇರಾನ್ ಮತ್ತು ಅಮೇರಿಕಾ ಮಧ್ಯೆ ಕದನ ವಿರಾಮ ಘೋಷಣೆಯಾಗಿ ಮಾತುಕತೆ ಆರಂಭವಾದ ಬಳಿಕ ಜೂನ್ ಕೊನೆಯ ವಾರದಲ್ಲಿ ಕಚ್ಚಾ ತೈಲ ದರ 70 ಡಾಲರ್‌ಗೆ ಇಳಿಕೆಯಾಗಿತ್ತು. ಕಚ್ಚಾ ತೈಲ ಬೆಲೆ ಶೀಘ್ರವಾಗಿ ಏರುತ್ತಿರುವುದರಿಂದ ಜಾಗತಿಕ ಮಟ್ಟದಲ್ಲಿ ಸರಕು ಸಾಗಣೆ ವೆಚ್ಚ ಹೆಚ್ಚಾಗಲಿದ್ದು, ಹಣದುಬ್ಬರ ಮತ್ತೆ ಏರಿಕೆಯಾಗುವ ಆತಂಕ ಸೃಷ್ಟಿಯಾಗಿದೆ. ತೈಲ ಬೆಲೆ ಜಿಗಿತದಿಂದಾಗಿ ಏಷ್ಯನ್ ಷೇರು ಮಾರುಕಟ್ಟೆಗಳು ಹಾಗು ಹೂಡಿಕೆದಾರರಲ್ಲಿ ಅಸ್ಥಿರತೆ ಉಂಟಾಗಿದೆ.

ಇಂಧನ ಬೆಲೆ ಸತತವಾಗಿ 90 ಡಾಲರ್ ದಾಟಿ ಮುನ್ನುಗ್ಗುತ್ತಿರುವುದು ಭಾರತ ಸೇರಿ ಪ್ರಮುಖ ಆಮದುದಾರ ದೇಶಗಳಿಗೆ ಆರ್ಥಿಕ ಹೊರೆಯಾಗಲಿದ್ದು, ಮುಂಬರುವ ದಿನಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ದರಗಳ ಮೇಲೆ ಪ್ರಭಾವ ಬೀರಬಹುದೆಂದು ಅಂದಾಜಿಸಲಾಗಿದೆ.

## 49 ಲ.ರೂ. ನಿವ್ವಳ ಲಾಭದಲ್ಲಿ ಬೇಲೂರು ಗ್ರಾಮೀಣ ಬ್ಯಾಂಕ್

• ಪ್ರಜೋದಯ ವರದಿ




**ಬೇಲೂರು:** ಬೇಲೂರು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಬ್ಯಾಂಕ್ 2025-26ನೇ ಸಾಲಿನಲ್ಲಿ 49.42 ಲ.ರೂ. ನಿವ್ವಳ ಲಾಭ ಗಳಿಸಿದ್ದು, ಸಾಲ ವಸೂಲಾತಿಯಲ್ಲೂ ಸಾಧನೆ ಮಾಡಿದೆ ಎಂದು ಬ್ಯಾಂಕ್ ಅಧ್ಯಕ್ಷ ಎಂ.ಡಿ. ದಿನೇಶ್ ಅವರು ಹೇಳಿದರು.

ಪಟ್ಟಣದ ವೀರಶೈವ ಕಲ್ಯಾಣ ಮಂಟಪದಲ್ಲಿ ಗುರುವಾರ ಆಯೋಜಿಸಿದ್ದ ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರೈತರು ಬ್ಯಾಂಕ್‌ನಿಂದ ಪಡೆದ ಸಾಲವನ್ನು ನಿಗದಿತ ಅವಧಿ ಯೊಳಗೆ ಮರು ಪಾವತಿ ಮಾಡಿದರೆ ಮಾತ್ರ ಬ್ಯಾಂಕ್‌ನ ಆರ್ಥಿಕ ಸ್ಥಿತಿ ಸದೃಢಗೊಂಡು ಬೇರೆ ರೈತರಿಗೆ ಸಾಲ ಸೌಲಭ್ಯ ಕಲ್ಪಿಸಲು ಸಾಧ್ಯವೆಂದರು.

ಸರ್ಕಾರ ರೈತರು, ಮಹಿಳೆಯರು ಹಾಗು ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲ ಯೋಜನೆಗಳಲ್ಲಿ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುತ್ತಿದೆ. ಈ ಯೋಜನೆಗಳ ಯಶಸ್ಸಿಗೆ ಫಲಾನುಭವಿಗಳು ಸಾಲವನ್ನು ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡುವುದು ಅತ್ಯಗತ್ಯ. 1953ರಿಂದ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕ್ ಕೃಷಿ ಅಭಿವೃದ್ಧಿಗೆ ಪೂರಕವಾಗಿ ವಿವಿಧ ಸಾಲ ಸೌಲಭ್ಯ ಗಳನ್ನು ಒದಗಿಸುತ್ತಿದೆ. ಜಿಲ್ಲೆಯಲ್ಲಿಯೇ ಮಾದರಿ ಬ್ಯಾಂಕ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದರು.

ಬ್ಯಾಂಕ್‌ನ ಉತ್ತಮ ಕಾರ್ಯನಿರ್ವಹಣೆ ಪರಿಗಣಿಸಿ ರಾಜ್ಯ ಮಟ್ಟದಲ್ಲಿ ಮೊದಲ ಬಾರಿಗೆ 7 ಕೋ. ರೂ. ಹೆಚ್ಚುವರಿ ಸಾಲ ಮಂಜೂರಾಗಿದ್ದು ಬ್ಯಾಂಕ್‌ಗೆ ಸಂದ ಗೌರವವಾಗಿದೆ. ಬ್ಯಾಂಕ್‌ಗೆ ಸಂಬಂಧಿಸಿದ ನಿವೇಶನದ ವಿವಾದ ನ್ಯಾಯಾಲಯದಲ್ಲಿದ್ದು, ಪರ್ಯಾಯ ಜಾಗ ಗುರುತಿಸಿ ಶಾಶ್ವತ ನಿವೇಶನ ಕಲ್ಪಿಸಲು ಪ್ರಯತ್ನಗಳು ನಡೆಯುತ್ತಿವೆ. ಮುಂದಿನ ಸಾಮಾನ್ಯ ಸಭೆಯೊಳಗೆ ಈ ಕುರಿತು ಸಿಹಿ ಸುದ್ದಿ ನೀಡಲಾಗುವುದು. ಬ್ಯಾಂಕ್‌ನ ನಿರ್ದೇಶಕರು ಅಥವಾ ಸದಸ್ಯರು ಸಾಲ ಮರುಪಾವತಿಯಿಂದ ವಿನಾಯಿತಿ ಪಡೆದಿಲ್ಲ. ಬಾಕಿ ಉಳಿಸಿಕೊಂಡವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಚುನಾವಣೆ ಸಂಬಂಧ ಅರ್ಹತೆ ಹಾಗು ಅನರ್ಹತೆ ಕುರಿತು ಅಂತಿಮ ನಿರ್ಧಾರ ಚುನಾವಣಾಧಿಕಾರಿ ಮತ್ತು ನ್ಯಾಯಾಲಯದ ವ್ಯಾಪ್ತಿಗೆ ಸೇರಿದೆ. ಚುನಾವಣೆ ನಡೆಸಲು ಬ್ಯಾಂಕ್‌ಗೆ 10 ರಿಂದ 12 ಲ.ರೂ. ವೆಚ್ಚವಾಗು ವುದರಿಂದ ಸದಸ್ಯರು ಒಮ್ಮತದ ನಿರ್ಧಾರ ಕೈಗೊಂಡು ಬ್ಯಾಂಕ್‌ನ ಹಿತ ಕಾಪಾಡಬೇಕು. 2025-26ನೇ ಸಾಲಿನಲ್ಲಿ ಬ್ಯಾಂಕ್ 49.42 ಲ.ರೂ. ನಿವ್ವಳ ಲಾಭಗಳಿಸಿದ್ದು, ಸಾಲ ವಸೂ ಲಾತಿಯಲ್ಲೂ ಉತ್ತಮ ಸಾಧನೆ ಮಾಡಿದೆ ಎಂದರು.

ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿರ್ದೇಶಕ ಗ್ರಾನೈಟ್ ರಾಜಶೇಖರ್ ಅವರು ಮಾತನಾಡಿ, ಸದಸ್ಯರು ಒಗ್ಗಟ್ಟಿನಿಂದ ಸಹಕಾರ ನೀಡಿ ಬ್ಯಾಂಕ್‌ನ ಅಭಿವೃದ್ಧಿಗೆ ಕೈಜೋಡಿಸಬೇಕು. ಸಾಲವನ್ನು ಜವಾಬ್ದಾರಿಯಿಂದ ಬಳಸಿ ನಿಗದಿತ ಸಮಯಕ್ಕೆ ಮರುಪಾವತಿ ಮಾಡುವ ಮೂಲಕ ಕೈಜೋಡಿಸಬೇಕೆಂದರು.

ಕೃಷಿ ಮತ್ತು ಗ್ರಾಮೀಣ ಬ್ಯಾಂಕ್‌ನ ಮಾಜಿ ಅಧ್ಯಕ್ಷರಿಗೆ ಸನ್ಮಾನಿಸಲಾಯಿತು. ನಿರ್ದೇಶಕರಾದ ಮೊಗಪ್ಪಗೌಡ, ಹಿರಿಯಣ್ಣಗೌಡ, ವಸಂತಕುಮಾರ್, ಶಿವಶಂಕರ್, ಶ್ರೀನಿವಾಸ್, ರಮೇಶ್, ರಾಜಶೇಖರ್, ಜಯಶಂಕರ್, ಗಂಗಮ್ಮ, ಕಾತ್ಯಾಯಿನಿ, ನಿಂಗರಾಜು ಇತರರಿದ್ದರು.

## 60ನೇ ವರ್ಷದ ಸಂಭ್ರಮ: ಸ್ವಾಗತ ಕಮಾನು ನಿರ್ಮಾಣ

• ಪ್ರಜೋದಯ ವರದಿ




**ಹಾಸನ:** ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) 60 ವರ್ಷಗಳ ಯಶಸ್ವಿ ಪಯಣ ಪೂರ್ಣಗೊಳಿಸಿರುವ ಹಿನ್ನಲೆ ಹಳೆ ವಿದ್ಯಾರ್ಥಿಗಳ ಸಹಕಾರ ಹಾಗು ದಾನಿಗಳ ನೆರವಿ ನಿಂದ ಕಾಲೇಜಿನ ಮುಖ್ಯ ಪ್ರವೇಶ ದ್ವಾರದಲ್ಲಿ ನಿರ್ಮಿಸಲಾದ ಸ್ವಾಗತ ಕಮಾನನ್ನು ಗುರುವಾರ ಉದ್ಘಾಟಿಸಲಾಯಿತು.

ಈ ವೇಳೆ ಹಳೆಯ ವಿದ್ಯಾರ್ಥಿ ಹಾಗು ಕಾಲೇಜಿನ ಎನ್.ಎಸ್.ಎಸ್. ಅಧಿಕಾರಿ ಕೆ.ಎಂ. ಶ್ರೀನಿವಾಸ್ ಅವರು ಮಾತನಾಡಿ, ಆರು ದಶಕಗಳಿಂದ ಸಾವಿರಾರು ಮಂದಿಗೆ ತಾಂತ್ರಿಕ ಶಿಕ್ಷಣ ನೀಡಿ ಉದ್ಯೋಗದ ದಾರಿ ತೋರಿಸಿರುವ ಈ ಸಂಸ್ಥೆ ರಾಜ್ಯದ ಪ್ರಮುಖ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಒಂದಾಗಿದೆ. 60ನೇ ವರ್ಷದ ಸಂಭ್ರಮ ಸ್ಮರಣೀಯವಾಗಿಸುವ ಉದ್ದೇಶದಿಂದ ಹಳೆ ವಿದ್ಯಾರ್ಥಿಗಳು, ದಾನಿಗಳು ಹಾಗು ಹಿತೈಷಿಗಳು ಒಗ್ಗೂಡಿ ಕಮಾನು ನಿರ್ಮಾಣ ಮಾಡಲಾಗಿದೆಂದು ಹೇಳಿದರು.

ಈ ಸಂಸ್ಥೆ ಕೇವಲ ಶಿಕ್ಷಣ ನೀಡಿಲ್ಲ ಬದುಕನ್ನು ಕಟ್ಟಿಕೊಟ್ಟಿದೆ. ಇಂದು ರಾಜ್ಯ ಮತ್ತು ದೇಶದ ವಿವಿಧೆಡೆ ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾವಿರಾರು ಹಳೇ ವಿದ್ಯಾರ್ಥಿಗಳು ಸಂಸ್ಥೆಯ ಹೆಮ್ಮೆಯ ಪ್ರತಿ ನಿಧಿಗಳಾಗಿದ್ದಾರೆ. ಸಂಸ್ಥೆಯ ಗೌರವ ಹೆಚ್ಚಿಸುವ ಉದ್ದೇಶದಿಂದ ಕಮಾನು ನಿರ್ಮಿಸಲಾಗಿದೆ. ಹಳೆ ವಿದ್ಯಾರ್ಥಿಗಳ ಅಭಿಮಾನ ಮತ್ತು ಬದ್ಧತೆಯನ್ನು ಶ್ಲಾಘಿಸಿ, ಸಂಸ್ಥೆಯ ಅಭಿವೃದ್ಧಿಗೆ ಎಲ್ಲರ ನಿರಂತರ ಸಹಕಾರ ಅಮೂಲ್ಯವಾಗಿದೆ ಎಂದರು.

ಕಾಲೇಜಿನಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಹಲವು ಕಾಮಗಾರಿ ಬಾಕಿ ಉಳಿದಿದ್ದು, ಹಳೆ ವಿದ್ಯಾರ್ಥಿಗಳು, ದಾನಿಗಳು ಕೈಲಾದ ಸಹಾಯ ಮಾಡಿ ಸಂಸ್ಥೆಯ ಬೆಳವಣಿಗೆಗೆ ಕೈಜೋಡಿಸ ಬೇಕೆಂದು ಮನವಿ ಮಾಡಿದರು. ಸಂಸ್ಥೆಯ ಉಪ ನಿರ್ದೇಶಕ ಪ್ರದೀಪ್ ಕುಮಾರ್, ಹಳೆ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಜೆ.ಟಿ.ಶಿವಣ್ಣ, ಖಜಾಂಚಿ ಪರಮೇಶ್, ನಿರ್ದೇಶಕ ಡಿ. ಸುರೇಶ್, ಜ್ಯೋತಿ, ಇಂದ್ರಮ್ಮ, ಸುನೀಲ್, ಕಚೇರಿ ಅಧೀಕ್ಷಕ ಚಂದ್ರಪ್ಪ ಇದ್ದರು.

## ಗೊಬ್ಬಳಿಯಲ್ಲಿ ಹೈನುಗಾರಿಕೆ ತರಬೇತಿ ಕಾರ್ಯಕ್ರಮ

• ಪ್ರಜೋದಯ ವರದಿ



**ಅರಕಲಗೂಡು:** ಇಲ್ಲಿನ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ವತಿಯಿಂದ ಬಸವಾಪಟ್ಟಣ ವಲಯದ ಕಟ್ಟೇಪುರ ಕಾರ್ಯಕ್ಷೇತ್ರದ ಗೊಬ್ಬಳಿ ಗ್ರಾಮದಲ್ಲಿ ಕೃಷಿ ಹಾಗು ಹೈನುಗಾರಿಕೆ ಕುರಿತು ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಪಶು ವೈದ್ಯಾಧಿಕಾರಿ ಡಾ|| ಚಿರಂಜೀವಿ ಅವರು ಮಾತನಾಡಿ, ಹೈನುಗಾರಿಕೆಯಲ್ಲಿ ಯಶಸ್ಸು ಸಾಧಿಸಲು ಅನುಸರಿಸಬೇಕಾದ ಕ್ರಮ, ಪಶುಗಳಲ್ಲಿ ಕಾಣಿಸಿ ಕೊಳ್ಳುವ ವಿವಿಧ ರೋಗಗಳ ತಡೆಗಟ್ಟುವಿಕೆ, ಸಮರ್ಪಕ ಆಹಾರ ಪದ್ಧತಿ, ಪಶುಗಳಿಗೆ ಸಮ ಯೋಚಿತ ಚಿಕಿತ್ಸೆ ನೀಡುವ ಅಗತ್ಯತೆ ಹಾಗು ಉತ್ತಮ ತಳಿಯ ಹಸುಗಳನ್ನು ಆಯ್ಕೆ ಮಾಡುವ ವಿಧಾನಗಳ ಕುರಿತು ಮಾಹಿತಿ ನೀಡಿದರು. ವೈಜ್ಞಾನಿಕ ಪದ್ಧತಿಯಲ್ಲಿ ಹೈನುಗಾರಿಕೆ ನಡೆಸಿದರೆ ರೈತರು ಆದಾಯ ಗಳಿಸಬಹುದೆಂದರು.

ಸಂಸ್ಥೆಯ ಕೃಷಿ ಮೇಲ್ವಿಚಾರಕ ಎಂ.ಸುನೀಲ್ ಕುಮಾರ್ ಅವರು ಮಾತನಾಡಿ, ಧರ್ಮಸ್ಥಳ ಗ್ರಾಮಾಭಿ ವೃದ್ಧಿ ಯೋಜನೆ ಆಯೋಜಿಸುತ್ತಿರುವ ವಿವಿಧ ತರಬೇತಿಗಳನ್ನು ರೈತರು ಸದುಪಯೋಗಪಡಿಸಿಕೊಳ್ಳ ಬೇಕೆಂದರು. ಫಸಲ್ ಭೀಮಾ ಯೋಜನೆ ಬೆಳೆ ವಿಮೆ ಮಾಡಿಸುವುದರಿಂದ ಆಗುವ ಪ್ರಯೋಜನ ಹಾಗು ಬೆಳೆ ನಷ್ಟದ ಸಂದರ್ಭದಲ್ಲಿನ ಪರಿಹಾರದ ಕುರಿತು ಮಾಹಿತಿ ನೀಡಿದರು.

ಗ್ರಾಮದ ಮುಖಂಡ ಶ್ರೀನಿವಾಸ್ ಅವರು ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಗ್ರಾಮದಲ್ಲಿ ಅನೇಕ ಕುಟುಂಬಗಳು ಹಾಗು ಮಹಿಳೆಯರು ಆರ್ಥಿಕವಾಗಿ ಸಬಲರಾಗಿದ್ದು, ಯೋಜನೆಯ ವಿವಿಧ ಕಾರ್ಯಕ್ರಮಗಳು ಜನರಿಗೆ ಅತ್ಯಂತ ಉಪಯುಕ್ತವಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮದ ಮಂಜೇಗೌಡ, ಬಸವಾ ಪಟ್ಟಣ ವಲಯದ ಮೇಲ್ವಿಚಾರಕಿ ರಾಧಾ, ಕಟ್ಟೇಪುರ ಕಾರ್ಯಕ್ಷೇತ್ರದ ಸೇವಾಪ್ರತಿನಿಧಿ ಉಷಾ, ಗ್ರಾಮದ ರೈತರು ಹಾಗು ವಿವಿಧ ಸ್ವಸಹಾಯ ಸಂಘಗಳ ಸದಸ್ಯರು ಇದ್ದರು.

## ನನ್ನ ದೇವತೆಯನ್ನು ಕಳೆದು ಕೊಂಡಿದ್ದೇನೆ: ರೇವಣ್ಣ ಕಣ್ಣೀರು

» ಮೊದಲನೇ ಪುಟದಿಂದ

ತಮ್ಮ ಜೀವನದಲ್ಲಿ ಒಂದು ಮನೆ ಕಟ್ಟಲಿಲ್ಲ, ಒಂದು ಕಾರನ್ನೂ ಖರೀದಿಸಲಿಲ್ಲ. ಪ್ರತಿದಿನ ದೇವರ ಪೂಜೆ ಮಾಡುತ್ತಿದ್ದರು. ಸಂಪೂರ್ಣ ಸಸ್ಯಾಹಾರಿಯಾಗಿದ್ದು, ಧರ್ಮಸ್ಥಳ ಹಾಗು ಸುಬ್ರಹ್ಮಣ್ಯ ದೇವರ ಮೇಲೂ ಅಪಾರ ಭಕ್ತಿ ಹೊಂದಿದ್ದರು. ತಾವು ಪ್ರತಿನಿತ್ಯ ಪೂಜೆ ಮಾಡಿಸಿ ದೇವರ ಹೂವನ್ನು ಪಡೆದು ಬಳಿಕವೇ ಕೆಲಸಕ್ಕೆ ತೆರಳುತ್ತಿದ್ದೆ ಎಂದು ಹೇಳಿದರು.

ಅಂತಿಮ ಯಾತ್ರೆ ಬೆಂಗಳೂರಿನಿಂದ ಹೊಳೆನರಸೀಪುರದವರೆಗೆ ಸುಮಾರು 17 ಗಂಟೆಗಳ ಕಾಲ ನಡೆದಿದ್ದು, ಮಾರ್ಗದುದ್ದಕ್ಕೂ ಸಾವಿರಾರು ಜನರು ಅಂತಿಮ ದರ್ಶನ ಪಡೆದರು. ನಮ್ಮ ತಾಯಿ ಇಷ್ಟೊಂದು ಜನರ ಪ್ರೀತಿ ಸಂಪಾದಿಸಿದ್ದಾರೆಂಬುದು ಆಗ ತಿಳಿಯಿತು. ಪಡುವಲಹಿಪ್ಪೆಯಲ್ಲಿ ಅಂತ್ಯಸಂಸ್ಕಾರ ನಡೆಸುವ ಬಗ್ಗೆ ಚರ್ಚೆಯಾಗಿದ್ದರೂ, ಸಹೋದರ ಹೆಚ್.ಡಿ. ಕುಮಾರಸ್ವಾಮಿ ಅವರ ಒತ್ತಾಯದ ಮೇರೆಗೆ ಮಾವಿನಕೆರೆ ಬೆಟ್ಟದ ರಂಗನಾಥಸ್ವಾಮಿ ಸನ್ನಿಧಿಯ ಸಮೀಪವೇ ಅಂತ್ಯಕ್ರಿಯೆ ನಡೆಸಲಾಯಿತು. ನಮ್ಮ ತಾಯಿ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಸಂತಾಪ ಸೂಚಿಸಿದ ಜಿಲ್ಲೆಯ ಜನರ ಪ್ರೀತಿಯನ್ನು ನಾನು ಎಂದಿಗೂ ಮರೆಯುವುದಿಲ್ಲ ಎಂದು ಎಂದರು.

ಅಂತ್ಯಕ್ರಿಯೆಗೆ ಬಹುತೇಕ ಮಠಗಳ ಸ್ವಾಮೀಜಿಗಳು, ಪಕ್ಷಾತೀತವಾಗಿ ರಾಜ್ಯದ ಮುಖ್ಯಮಂತ್ರಿ ಸೇರಿ ಕೇಂದ್ರ ಮತ್ತು ರಾಜ್ಯ ಸಚಿವರು, ಎಲ್ಲಾ ರಾಜಕಾರಣಿಗಳು ಆಗಮಿಸಿದ್ದರು. ಜಿಲ್ಲಾಡಳಿತದ ಅಧಿಕಾರಿಗಳು, ವಿಶೇಷವಾಗಿ ಪೊಲೀಸ್ ಇಲಾಖೆಯಲ್ಲಿ ಸ್ವತಃ ಐಜಿ ಅವರೇ ಆಗಮಿಸಿದ್ದರು. ಹಾಗೆಯೇ ಮಾಧ್ಯಮಗಳು ಸಾಕಷ್ಟು ಸಹಕಾರ ನೀಡಿದ್ದಕ್ಕೆ ಧನ್ಯವಾದ ಹೇಳಿದರು. ಎಲ್ಲರ ಉಪಕಾರ ಎಂದೂ ಮರೆಯುವುದಿಲ್ಲವೆಂದು ಕೃತಜ್ಞತೆ ಸಲ್ಲಿಸಿದರು.

## ನಿಯಮ ಉಲ್ಲಂಘಿಸಿದ ಮದ್ಯದಂಗಡಿಗಳ ವಿರುದ್ಧ ದೂರು ದಾಖಲು

» ಮೊದಲನೇ ಪುಟದಿಂದ

ಕೈಗೊಳ್ಳಲಾಗಿದೆ. ಅಕ್ರಮ ಮದ್ಯ ಮಾರಾಟ ಪ್ರಕರಣ ಕಂಡುಬದಿರುವ ಅಂಗಡಿಗಳ ವಿರುದ್ಧವೂ ಕ್ರಮಕ್ಕೆ ಆದೇಶಿಸಲಾಗಿದೆ.


ಪಟ್ಟಣದ ಅರಕಲಗೂಡು ರಸ್ತೆಯಲ್ಲಿರುವ ಬಾರ್, ಮೈಸೂರು ರಸ್ತೆಯ ಹಳ್ಳಿಮೈಸೂರು ತಿರುವಿನಲ್ಲಿನ ಬಾರ್ ಮತ್ತು ದೊಡ್ಡಕಾಡನೂರು ಗ್ರಾಮದ ಮದ್ಯದಂಗಡಿ ಹಾಗು ಇನ್ನಿತರ ಬಾರ್‌ಗಳ ಮುಂದೆ ಪಾರ್ಕಿಂಗ್‌ಗೆ ಜಾಗ ಇಲ್ಲದೆ ರಸ್ತೆಗೆ ವಾಹನ ನಿಲುಗಡೆಯಾಗುತ್ತಿದೆ. ಇವುಗಳ ಪರವಾನಗಿ ರದ್ದುಗೊಳಿಸಿ ಬೇರೆಡೆ ಅನುಕೂಲತೆ ಮಾಡಿ ಎಂದು ಸಾರ್ವಜನಿಕರು ದೂರು ನೀಡಿದ್ದರ ಮೇಲೂ ಎಚ್ಚರಿಕೆ ನೀಡಲಾಗಿದೆ.

ಚಿಕ್ಕಮಗಳೂರು ಅಬಕಾರಿ ಡಿವೈಎಸ್ಪಿ ಕೀರ್ತಿ ಕುಮಾರ್, ನಿರೀಕ್ಷಕ ಪೃಥ್ವಿ, ಹೊಳೆನರಸೀಪುರ ವೃತ್ತ ನಿರೀಕ್ಷಕ ಪಾಂಡುರಂಗ ಹಾಜರಿದ್ದರು.

## ಬೈಕ್‌ಗೆ ಆ್ಯಂಬುಲೆನ್ಸ್ ಡಿಕ್ಕಿ: ಗಲಾಟೆ

**ಆಸ್ಪತ್ರೆಗೆ ದಾಖಲಿಸುವಷ್ಟರಲ್ಲೇ ರೋಗಿ ಸಾವು**

• ಪ್ರಜೋದಯ ವರದಿ



**ಹಾಸನ:** ಮದ್ಯಪಾನ ಮಾಡಿ ಬೈಕ್ ಚಲಾಯಿಸುತ್ತಿದ್ದ ವ್ಯಕ್ತಿಯೊಬ್ಬ ಆ್ಯಂಬುಲೆನ್ಸ್‌ಗೆ ಡಿಕ್ಕಿ ಹೊಡೆದ, ಬಳಿಕ ಆ್ಯಂಬುಲೆನ್ಸ್ ತಡೆದು ಗಲಾಟೆ ನಡೆಸಿದ ಘಟನೆ ನಗರದ ಹೊರವಲಯದ ಹನಮಂತಪುರದಲ್ಲಿ ನಡೆದಿದೆ. ಆ್ಯಂಬುಲೆನ್ಸ್‌ನಲ್ಲಿ ಚಿಕಿತ್ಸೆಗೆ ತೆರಳುತ್ತಿದ್ದ ವ್ಯಕ್ತಿ ಆಸ್ಪತ್ರೆಗೆ ದಾಖಲಿಸುವಷ್ಟರಲ್ಲೇ ಮೃತಪಟ್ಟಿದ್ದಾರೆ.

ಅರಕಲಗೂಡು ತಾಲ್ಲೂಕಿನ ಕೊಣನೂರಿನ ನಿವಾಸಿ ಫೈಜ್‌ಖಾನ್ ಅಪಘಾತದಲ್ಲಿ ಗಾಯಗೊಂಡಿದ್ದು, ಆ್ಯಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗ ಹನಮಂತಪುರ ಸಮೀಪ ಮದ್ಯದ ಅಮಲಿನಲ್ಲಿದ್ದ ಬೈಕ್ ಸವಾರ ಆ್ಯಂಬುಲೆನ್ಸ್‌ಗೆ ಡಿಕ್ಕಿ ಹೊಡೆದಿದ್ದಾನೆ. ಅಪಘಾತದ ಬಳಿಕ ಚಾಲಕ ಮತ್ತು ಬೈಕ್ ಸವಾರನ ನಡುವೆ ವಾಗ್ವಾದ ನಡೆದು, ಪರಿಸ್ಥಿತಿ ಉದ್ವಿಗ್ನಗೊಂಡಿತು. ಈ ವೇಳೆ ಪಾನಮತ್ತ ವ್ಯಕ್ತಿಯ ಪರವಾಗಿ ಹನಮಂತಪುರ ಗ್ರಾಮದ ಕೆಲವರು ಸ್ಥಳಕ್ಕೆ ಆಗಮಿಸಿ ಗಲಾಟೆ ನಡೆಸಿದ್ದು, ಎರಡೂ ಕಡೆಯವರ ನಡುವೆ ಕೈಕೈ ಮಿಲಾಯಿ ಸುವ ಮಟ್ಟಕ್ಕೆ ಪರಿಸ್ಥಿತಿ ತಲುಪಿತು. ಕೆಲಕಾಲ ಸಂಚಾರಕ್ಕೂ ಅಡ್ಡಿ ಯುಂಟಾಯಿತು. ಈ ಎಲ್ಲಾ ಬೆಳವಣಿಗೆಗಳ ನಡುವೆ ಗಂಭೀರ ಗಾಯಗೊಂಡಿದ್ದ ಫೈಜ್ ಖಾನ್ ಅವರನ್ನು ಆಸ್ಪತ್ರೆಗೆ ದಾಖಲಿಸು ವಷ್ಟರಲ್ಲಿ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಅಪಘಾತ ಹಾಗು ಗಲಾಟೆಗೆ ಸಂಬಂಧಿಸಿದಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

## ಸಚಿನ್ ದಾಖಲೆ ಮುರಿದ ವೈಭವ್ ಸೂರ್ಯವಂಶಿ

ನವದೆಹಲಿ: ಭಾರತೀಯ ಕ್ರಿಕೆಟ್ ಭವಿಷ್ಯದ ನವತಾರೆ ಎಂದೇ ಗುರುತಿಸಿಕೊಂಡಿರುವ ವೈಭವ್ ಸೂರ್ಯವಂಶಿ ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಸಿಡಿಲಬ್ಬರದ ಬ್ಯಾಟಿಂಗ್ ನಡೆಸಿ ಕ್ರಿಕೆಟ್ ಜಗತ್ತು ಹುಬ್ಬೇರಿಸುವಂತೆ ಮಾಡಿದ್ದಾರೆ.
ಕೇವಲ 18 ಎಸೆತಗಳಲ್ಲಿ ಸ್ಫೋಟಕ ಅರ್ಧಶತಕ ಸಿಡಿಸುವ ಮೂಲಕ, ಕ್ರಿಕೆಟ್ ದೇವರು ಎಂದೇ ಕರೆಯುವ ಸಚಿನ್ ತೆಂಡೂಲ್ಕರ್ ಹೆಸರಿನಲ್ಲಿದ್ದ ಕಿರಿಯ ವಯಸ್ಸಿನ ವೇಗದ ರನ್ ಸರದಾರನ ದಾಖಲೆಯನ್ನು ಮುರಿದಿದ್ದಾರೆ. ಈ ಮೂಲಕ ಅತಿ ಸಣ್ಣ ವಯಸ್ಸಿನಲ್ಲಿ ವೇಗದ ಅರ್ಧಶತಕ ಬಾರಿಸಿದ ಯುವ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.
1989ರಲ್ಲಿ ಪಾಕಿಸ್ತಾನ ವಿರುದ್ಧ ಟೆಸ್ಟ್ ಪಂದ್ಯದಲ್ಲಿ ಸಚಿನ್ ತೆಂಡೂಲ್ಕರ್ ವೇಗದ ಅರ್ಧ ಶತಕ ಸಿಡಿಸಿದ್ದರು. ಆಗ ಅವರಿಗೆ 16 ವರ್ಷ 213 ದಿನಗಳಾಗಿದ್ದವು. ಸೂರ್ಯವಂಶಿ 15 ವರ್ಷ 118 ದಿನಗಳಲ್ಲೇ ಸಚಿನ್ ದಾಖಲೆ ಮುರಿದರು.
ಪಂದ್ಯದ ಆರಂಭದಿಂದಲೇ ಎದುರಾಳಿ ಬೌಲರ್‌ಗಳ ಮೇಲೆ ಸವಾರಿ ಮಾಡಿದ ವೈಭವ್, ಮೈದಾನದಲ್ಲಿ ಸಿಕ್ಸರ್ ಮತ್ತು ಬೌಂಡರಿಗಳ ಸುರಿಮಳೆ ಗೈದರು. ಎದುರಿಸಿದ 18 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದರು. ಎದುರಾಳಿ ಬೌಲರ್‌ಗಳು ರನ್ ನಿಯಂತ್ರಿಸಲಾಗದೆ ವೈಭವ್‌ಗೆ ಶರಣಾದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK